ಕರ್ನಾಟಕ ಸರ್ಕಾರ Government of Karnataka

# ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

## *Raichur Institute of Medical Sciences, Raichur*

(ಸರ್ಕಾರದ ಸ್ವಾಯತ್ತ ಸಂಸ್ಥೆ) *(Govt. Autonomous Institution)*

ಹೈದ್ರಾಬಾದ್ ರೋಡ್, ರಾಯಚೂರು -584102 *Hyderabad Road, Raichur -584102*

Web. www. rims-raichur.com Phone /Fax-08532-238488/89 Email :info@rims-raichur.com

---

24ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

ಸನ್ಮಾನ್ಯ ಡಾ॥ ಶರಣ ಪ್ರಕಾಶ ಆರ್. ಪಾಟೀಲ್, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 18.04.2016ರಂದು ಕೊಠಡಿ ಸಂಖ್ಯೆ. 301, ಮೂರನೇ ಮಹಡಿ, ವಿಧಾನ ಸೌಧ, ಬೆಂಗಳೂರಿನಲ್ಲಿ ಜರುಗಿದ ರಿಮ್ಸ್, ರಾಯಚೂರಿನ 24ನೇ ಆಡಳಿತ ಮಂಡಳಿ ಸಭೆಯ ಸಭಾ ನಡುವಳಿಗಳು.

ಸಭೆಯಲ್ಲಿ ಹಾಜರಿದ್ದ ಸದಸ್ಯರು

1. ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ – ಅಧ್ಯಕ್ಷರು
   ವೈದ್ಯಕೀಯ ಶಿಕ್ಷಣ ಸಚಿವರು,
   ಕರ್ನಾಟಕ ಸರ್ಕಾರ, ಬೆಂಗಳೂರು. ಹಾಗೂ
   ಅಧ್ಯಕ್ಷರು, ರಾ.ವೈ.ವಿ.ಸಂಸ್ಥೆ, ಆಡಳಿತ ಮಂಡಳಿಯ ಗೌರವಾನ್ವಿತ ಅಧ್ಯಕ್ಷರು
2. ಶ್ರೀ ಎಂ. ಲಕ್ಷ್ಮೀನಾರಾಯಣ, ಭಾ.ಆ.ಸೇ – ಉಪಾಧ್ಯಕ್ಷರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ),
   ಬೆಂಗಳೂರು. ಹಾಗೂ
   ಉಪಾಧ್ಯಕ್ಷರು, ರಾ.ವೈ.ವಿ.ಸಂಸ್ಥೆ, ಆಡಳಿತ ಮಂಡಳಿಯ ಗೌರವಾನ್ವಿತ ಅಧ್ಯಕ್ಷರು
3. ಕೆ. ಮುರಳಿದರ್, – ಸದಸ್ಯರು
   ಉಪ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪ್ರತಿನಿಧಿಗಳು
   ವಿಧಾನ ಸೌಧ, ಬೆಂಗಳೂರು.
4. ಶ್ರೀ ಚಂದ್ರಶೇಖರ್, – ವಿಶೇಷ ಆಹ್ವಾನಿತರು
   ಸರ್ಕಾರದ ಉಪ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ), ಬೆಂಗಳೂರು.
5. ಡಾ. ಎಸ್.ಎಸ್. ಹರಸೂರು, – ಸದಸ್ಯರು
   ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
   ಬೆಂಗಳೂರು
6. ಡಾ. ಬಸವರಾಜ್ ಪೀರಾಪುರ್, – ವಿಶೇಷ ಆಹ್ವಾನಿತರು
   ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು.
7. ಡಾ. ವಾಸುದೇವ ಜಾಗೀರ್‌ದಾರ್ – ವಿಶೇಷ ಆಹ್ವಾನಿತರು
   ಸ್ಥಾನಿಕ ವೈದ್ಯಾಧಿಕಾರಿಗಳು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು.
8. ಡಾ. ಜಿ.ಬಿ. ವಿನುತ್, – ವಿಶೇಷ ಆಹ್ವಾನಿತರು
   ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು

| | | |
|---|---|---|
| (ಡಾ.ಕವಿತಾ ಪಾಟೀಲ್)<br>ನಿರ್ದೇಶಕರು,<br>ರಿಮ್ಸ್, ರಾಯಚೂರು<br>ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ರಿಮ್ಸ್ ಆಡಳಿತ ಮಂಡಳಿ ಸಭೆ,<br>ರಾಯಚೂರು | (ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆಕುಕ, ವೈದ್ಯಕೀಯ ಶಿಕ್ಷಣ,<br>ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ<br>ಮಂಡಳಿ ಸಭೆ, ರಾಯಚೂರು | (ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),<br>ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ<br>ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,<br>ರಿಮ್ಸ್, ರಾಯಚೂರು |

9. ಡಾ. ಕವಿತಾ ಪಾಟೀಲ್ — ಸದಸ್ಯ ಕಾರ್ಯದರ್ಶಿ

ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ರಾಯಚೂರು.

ಡಾ. ಕವಿತಾ ಪಾಟೀಲ್, ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು ಉಪಸ್ಥಿತರಿದ್ದ ಗೌರವಾನ್ವಿತ ಅಧ್ಯಕ್ಷರನ್ನು ಹಾಗೂ ಸದಸ್ಯರುಗಳನ್ನು ಸ್ವಾಗತಿಸುತ್ತಾ ಸನ್ಮಾನ್ಯ ಸಚಿವರು, ವೈದ್ಯಕೀಯ ಶಿಕ್ಷಣ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಸಭೆ ಇವರ ಅನುಮತಿಯನ್ನು ಪಡೆದು ಸಭೆಯನ್ನು ಪ್ರಾರಂಬಿಸಲಾಯಿತು.

<u>ಆಡಳಿತ ಮಂಡಳಿ ಸಭೆಯ ಅಧ್ಯಕ್ಷರ ಸಮಕ್ಷಮದಲ್ಲಿ ತೆಗೆದುಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.</u>

| | |
|---|---|
| ವಿಷಯ ಸೂಚಿ ಸಂಖ್ಯೆ – 1 | ದಿನಾಂಕ: 11.09.2015 ರಂದು ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 23ನೇ ಆಡಳಿತ ಮಂಡಳಿಯ ಅನುಪಾಲನ ವರದಿಯನ್ನು ಸಲ್ಲಿಸುವ ಬಗ್ಗೆ. |

<u>ಸಭೆಯ ತೀರ್ಮಾನ :-</u>

ದಿನಾಂಕ: 11.09.2015 ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 23ನೇ ಆಡಳಿತ ಮಂಡಳಿಯ ಅನುಪಾಲನ ವರದಿಯನ್ನು ಪರಿಶೀಲಿಸಿ ಅನುಮೋದಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 02 | ದಿನಾಂಕ 27.02.2016 ರಂದು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಜರುಗಿದ ಬೋಧಕ ಸಿಬ್ಬಂದಿ ನೇರ ಸಂದರ್ಶನದ ಸಭಾ ನಡವಳಿಗಳನ್ನು ಅನುಮೋದಿಸುವ ಬಗ್ಗೆ. |

ಭಾರತೀಯ ವೈದ್ಯಕೀಯ ಮಂಡಳಿಯ ಅಂತಿಮ ಮಾನ್ಯತೆಯನ್ನು ಪಡೆಯಲು ಅವಶ್ಯವಿರುವ ಖಾಲಿ ಇರುವ ಬೋಧಕ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಅನುಮತಿ ಪಡೆದು ನೇರ ಸಂದರ್ಶನವನ್ನು ದಿನಾಂಕ 27.02.2016ರಂದು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಹಿರಿಯ ಸ್ಥಾನಿಕರು ಖಾಯಂ ನೇಮಕಾತಿ ಮಾಡಿಕೊಳ್ಳಲು ಹಾಗು ಕಿರಿಯ ಸ್ಥಾನಿಕರು / ಬೋಧಕರ ಹುದ್ದೆಗಳನ್ನು ಸಂಚಿತ ವೇತನದಲ್ಲಿ ನೇಮಕಾತಿ ಮಾಡಿಕೊಳ್ಳಲು ನೇರ ಸಂದರ್ಶನವನ್ನು ಏರ್ಪಡಿಸಲಾಗಿತ್ತು. ಸಿಬ್ಬಂದಿ ನೇಮಕಾತಿ ಸಮಿತಿ ಸಭೆಯ ಅನುಮೋದನೆಯಂತೆ ಸಭಾ ನಡವಳಿಗಳನ್ನು ಸಿದ್ದಪಡಿಸಿ, ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸದರಿ ಕಡತವು ಸರ್ಕಾರದಿಂದ ಅನುಮೋದನೆಗೊಂಡು ಈ ಕಾರ್ಯಲಯಕ್ಕೆ ಸ್ವೀಕೃತವಾಗಿರುತ್ತದೆ.

ಬೋಧಕ ಸಿಬ್ಬಂದಿ ನೇರ ಸಂದರ್ಶನದಲ್ಲಿ ಆಯ್ಕೆಯಾದ ಬೋಧಕ ಸಿಬ್ಬಂದಿಗಳ ಆದೇಶಗಳನ್ನು ಸಿದ್ಧಪಡಿಸಲಾಗುತ್ತಿದೆ. ಕಾರಣ ಸಿಬ್ಬಂದಿ ನೇಮಕಾತಿ ಸಮಿತಿ ಸಭೆಯ ಅನುಮೋದನೆಯಂತೆ ಬೋಧಕ ಸಿಬ್ಬಂದಿಯ ನೇರ ಸಂದರ್ಶನದ ಸಭಾ ನಡುವಳಿಗಳನ್ನು ಆಡಳಿತ ಮಂಡಳಿಯ ಅನುಮೋಧನೆ ಕೋರಿ ಸಲ್ಲಿಸಿದೆ.

<u>ಸಭೆಯ ತೀರ್ಮಾನ :-</u>

ದಿನಾಂಕ : 27.02.2016 ರಂದು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಖಾಲಿ ಇರುವ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಹಿರಿಯ ಸ್ಥಾನಿಕರು ಹಾಗು ಕಿರಿಯ ಸ್ಥಾನಿಕರು / ಬೋಧಕರ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಜರುಗಿಸಲಾದ ಬೋಧಕ ಸಿಬ್ಬಂದಿಗಳ ನೇರ ಸಂದರ್ಶನದ ಸಭಾ ನಡಾವಳಿಗಳನ್ನು ಆಡಳಿತ ಮಂಡಳಿಯು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆ ನೀಡಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| ವಿಷಯ ಸೂಚಿ ಸಂಖ್ಯೆ – 03 | ದಿನಾಂಕ 14.12.2015 ರಂದು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಜರುಗಿದ ಆಡಿಯೋಮೆಟ್ರಿ ಹಾಗೂ ಸ್ಪೀಚ್ ಥೆರಪಿಸ್ಟ್ ಹುದ್ದೆಯ ನೇರ ಸಂದರ್ಶನದ ಸಭಾ ನಡವಳಿಗಳನ್ನು ಅನುಮೋದಿಸುವ ಬಗ್ಗೆ. |
|---|---|

ಭಾರತೀಯ ವೈದ್ಯಕೀಯ ಮಂಡಳಿಯು ಗುರುತಿಸಲಾಗಿದ್ದ ಅಡಿಯೋಮೆಟ್ರಿ ಹಾಗೂ ಸ್ಪೀಚ್ ಥೆರಪಿಸ್ಟ್ ಹುದ್ದೆಯ ನ್ಯೂನತೆಯನ್ನು ದಿನಾಂಕ 14.12.2015 ರಂದು ಸರ್ಕಾರದ ಅನುಮತಿ ಪಡೆದು ನಿಯಮಾನುಸಾರ ನೇರ ಸಂದರ್ಶನ ಪ್ರಕ್ರಿಯೆಯನ್ನು ಜರುಗಿಸಿ ಹುದ್ದೆಗಳನ್ನು ಮಾಡಿಕೊಳ್ಳಲಾಗಿದ್ದು, ಅಡಿಯೋಮೆಟ್ರಿ ಹಾಗೂ ಸ್ಪೀಚ್ ಥೆರಪಿಸ್ಟ್ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಜರುಗಿಸಲಾದ ನೇರ ಸಂದರ್ಶನದ ಸಭಾ ನಡಾವಳಿಗಳನ್ನು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

| ಕ್ರಮ ಸಂಖ್ಯೆ | ಸಿಬ್ಬಂದಿಯ ಹೆಸರು | ಪದನಾಮ | ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ |
|---|---|---|---|
| 1 | ಸಾಯಿಕಿರಣ್ | ಸ್ಪೀಚ್ ಥೆರಪಿಸ್ಟ್ | 06.02.2016 |
| 2 | ಎಂ.ಗೋಪಾಲ್ | ಸ್ಪೀಚ್ ಥೆರಪಿಸ್ಟ್ | 04.02.2016 |
| 3 | ಅನುಷಾ ಕೊಟ್ರಿಕಿ | ಅಡಿಯೋಮೆಟ್ರಿ ಟೆಕ್ನಿಷಿಯನ್ | 06.02.2016 |

ಸಭೆಯ ತೀರ್ಮಾನ :–

ದಿನಾಂಕ : 14.12.2015 ರಂದು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಖಾಲಿ ಇರುವ ಆಡಿಯೋಮೆಟ್ರಿ ಹಾಗೂ ಸ್ಪೀಚ್ ಥೆರಪಿಸ್ಟ್ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಜರುಗಿಸಲಾದ ನೇರ ಸಂದರ್ಶನದ ಸಭಾ ನಡಾವಳಿಗಳನ್ನು ಆಡಳಿತ ಮಂಡಳಿಯು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆ ನೀಡಿತು.

| ವಿಷಯ ಸೂಚಿ ಸಂಖ್ಯೆ – 04 | ದಿನಾಂಕ 13.10.2015 ರಂದು ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 10ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳನ್ನು ಅನುಮೋದಿಸುವ ಬಗ್ಗೆ. |
|---|---|

ದಿನಾಂಕ 13.10.2015 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ. 105, ವಿಕಾಸ ಸೌಧ, ಬೆಂಗಳೂರಿನಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 10ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳನ್ನು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 10ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳನ್ನು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆ ನೀಡಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್; ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು.

| ವಿಷಯ ಸೂಚಿ ಸಂಖ್ಯೆ – 05 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ವೇತನವನ್ನು ಹುದ್ದೆಯ ಮೂಲ ವೇತನಕ್ಕೆ ರೂ. 100/– ಗಳನ್ನು ಕಡಿತಗೊಳಿಸಿ ಪಾವತಿಸಲು ಅನುಮತಿ ನೀಡುವ ಬಗ್ಗೆ. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ದಿನಾಂಕ 16.08.2007 ರಿಂದ ಪ್ರಾರಂಭಗೊಂಡಿದ್ದು, ಪ್ರಾರಂಭದಲ್ಲಿ ಸಂಸ್ಥೆಯ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವ ಹಿತದೃಷ್ಟಿಯಿಂದ ಮತ್ತು ಇದೇ ಸಮಯದಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯು ಮೊದಲನೇ ಹಂತದ ನವೀಕರಣಕ್ಕೆ ಸಂಸ್ಥೆಗೆ ಯಾವುದೇ ಸಮಯದಲ್ಲಿ ಭೇಟಿ ನೀಡುವ ಹಿತದೃಷ್ಟಿಯಿಂದ ಸಂಸ್ಥೆಗೆ ಬೇಕಾದ ಅವಶ್ಯಕ ಬೋಧಕೇತರ ಸಿಬ್ಬಂದಿಗಳನ್ನು ಈ ಸಂಸ್ಥೆಗೆ ಸರ್ಕಾರದ ಆದೇಶ ಸಂಖ್ಯೆ. ಆಕುಕ / 266 / ಎಂಪಿಎಸ್ / 2006 ದಿನಾಂಕ 12.09.2006ರನ್ವಯ ಸರ್ಕಾರದಿಂದ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಸಂಚಿತ ವೇತನದ ಮೇಲೆ 21 ಪ್ರ.ದ.ಸ, ದ್ವಿ.ದ.ಸ – 01, ವೈದ್ಯಕೀಯ ದಾಖಲಾತಿ ತಂತ್ರಜ್ಞರು –03, ಪ್ರಯೋಗಶಾಲ ತಂತ್ರಜ್ಞರು – 02, ಕ್ಷ–ಕಿರಣ ತಂತ್ರಜ್ಞರು – 02, ಕಲಾವಿದ – 01, ಓಟಿ ತಂತ್ರಜ್ಞರು – 04, ಸಹಾಯಕ ಗ್ರಂಥಪಾಲಕರು – 01, ವಿದ್ಯುತ್‌ಕರ್ಮಿಗಳು – 02, ಪ್ಲಂಬರ್ – 02, ದೈಹಿಕ ಶಿಕ್ಷಕರು – 01, ವಾಹನ ಚಾಲಕರು – 03 ಮತ್ತು 76 ಗ್ರೂಪ್ ಡಿ ನೌಕರರನ್ನು ನೇಮಿಸಿಕೊಳ್ಳಲಾಗಿತ್ತು.

ಸರ್ಕಾರಿ ಆದೇಶ ಸಂಖ್ಯೆ ನಂ. ಆ.ಇ /7/ ಎಸ್‌ಆರ್‌ಪಿ / 2012 ದಿನಾಂಕ 21.04.2012ರನ್ವಯ ಸರ್ಕಾರವು 6ನೇ ವೇತನವನ್ನು ದಿನಾಂಕ 01.04.2012ರಿಂದ ಅನ್ವಯವಾಗುವಂತೆ ಜಾರಿ ಮಾಡಿದ್ದರಿಂದ, ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಪ್ರಸ್ತುತ ಪಾವತಿಸುತ್ತಿರುವ ವೇತನವು ತುಂಬಾ ಕಡಿಮೆಯಿದ್ದು, ವೇತನವನ್ನು ಹೆಚ್ಚಿಸುವಂತೆ ಕೋರಿದ್ದರು. ಈ ಹಿನ್ನಲೆಯಲ್ಲಿ ದಿನಾಂಕ 24.05.2012 ರಂದು ಜರುಗಿದ ರಿಮ್ಸ್ ಸಂಸ್ಥೆಯ 13ನೇ ಆಡಳಿತ ಮಂಡಳಿ ಸಭೆಯ ವಿಷಯ ಸೂಚಿ ಸಂಖ್ಯೆ. 06ರಲ್ಲಿ ಮಂಡಿಸಲಾಗಿ ಆಡಳಿತ ಮಂಡಳಿಯು ಸದರಿ ಸಿಬ್ಬಂದಿಗಳಿಗೆ 6ನೇ ವೇತನ ಆಯೋಗದಂತೆ ಹುದ್ದೆಯ ಮೂಲ ವೇತನಕ್ಕೆ ಶೇ 75%ರಷ್ಟನ್ನು ನಿಗದಿ ಪಡಿಸಿ ಪಾವತಿಸುವಂತೆ ಅನುಮತಿ ನೀಡಲಾಗಿತ್ತು. 13ನೇ ಆಡಳಿತ ಮಂಡಳಿಯ ನಿರ್ಧಾರದಂತೆ, ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಹುದ್ದೆಯ ಮೂಲ ವೇತನದ ಶೇ 75%ರಷ್ಟು ವೇತನವನ್ನು ನಿಗದಿ ಪಡಿಸಿ ಪಾವತಿಸಲಾಗುತ್ತಿದೆ.

ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳು ಸದ್ಯ ನೀಡುತ್ತಿರುವ ವೇತನವು ತುಂಬಾ ಕಡಿಮೆಯಾಗಿದ್ದು, ಇತ್ತೀಚಿನ ಮಾರುಕಟ್ಟೆ ಬೆಲೆಗಳ ಏರಿಕೆಯಿಂದ, ಸದ್ಯ ನೀಡುತ್ತಿರುವ ವೇತನದಲ್ಲಿ ಸಿಬ್ಬಂದಿಗಳು ಅವರನ್ನು ಅವಲಂಬಿಸಿದ ಪೋಷಕರನ್ನು ಮತ್ತು ಕುಟುಂಬ ಸದಸ್ಯರನ್ನು ಪೋಷಿಸುವುದು ತುಂಬಾ ಕಷ್ಟಕರವಾಗಿದ್ದು, ಅಸಹನೀಯ ಸ್ಥಿತಿಯಲ್ಲಿ ನಾವು ಜೀವನವನ್ನು ನಡೆಸುತ್ತಿದ್ದೇವೆ ತಿಳಿಸಿ ಮನವಿಯನ್ನು ಈ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ. ಅದೇ ರೀತಿ ಏಕಕಾಲಕ್ಕೆ ಮಾನ್ಯ ಮುಖ್ಯಮಂತ್ರಿಯವರಿಗೆ ಸಹ ಮನವಿಯನ್ನು ಸಲ್ಲಿಸಿದ್ದು, ಇದಕ್ಕೆ ಸ್ಪಂದಿಸಿದ ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಗಳು ಸದರಿ ಸಿಬ್ಬಂದಿಗಳ ಕೋರಿಕೆಯನ್ನು ಸಹಾನುಭೂತಿಯಿಂದ ಪರಿಶೀಲಿಸಿ ಸೂಕ್ತ ಪರಿಹಾರವನ್ನು ಒದಗಿಸುವಂತೆ ಕೋರಿರುತ್ತಾರೆ.

ರಾಯಚೂರು ಜಿಲ್ಲೆಯ ಜನಪ್ರತಿನಿಧಿಗಳಾದ ಬಿ.ವಿ.ನಾಯಕ, ಸಂಸದರು, ರಾಯಚೂರು ಜಿಲ್ಲೆ, ತಿಪ್ಪರಾಜು, ಶಾಸಕರು, ರಾಯಚೂರು ಗ್ರಾಮೀಣ, ಬಸವರಾಜ ಪಾಟೀಲ್ ಇಟಗಿ, ವಿಧಾನ ಪರಿಷತ್ ಸದಸ್ಯರು, ರಾಯಚೂರು, ಎ.ವಸಂತಕುಮಾರ್, ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ ಸಮಿತಿ, ರಾಯಚೂರು ಇವರುಗಳು ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ವೇತನವನ್ನು ಮೂಲ ವೇತನಕ್ಕೆ ರೂ. 100/– ಗಳನ್ನು ಕಡಿತಗೊಳಿಸಿ ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಅಧ್ಯಕ್ಷರು, ರಿಮ್ಸ್ ಆಡಳಿತ ಮಂಡಳಿ ಇವರನ್ನು ಕೋರಿರುತ್ತಾರೆ.

ಈ ಸಂಸ್ಥೆಯಲ್ಲಿ ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳು ಸಂಸ್ಥೆಯ ಆಡಳಿತ ಸುಗಮವಾಗಿ ಸಾಗಿಸುವಲ್ಲಿ ಮತ್ತು ಭಾರತೀಯ ವೈದ್ಯಕೀಯ ಪರಿಷತ್ತಿನ ಅನುಮೋದನೆ ಪಡೆಯಲು ಹಗಲು ರಾತ್ರಿ ಅವಿರತ ಪ್ರಯತ್ನ ಮಾಡಿದ್ದಾರಲ್ಲದೇ ದಿನಂಪ್ರತಿ ಸರ್ಕಾರದೊಂದಿಗೆ

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಪತ್ರ ವ್ಯವಹಾರ, ಕಡತಗಳ ರಕ್ಷಣೆ, ಕಟ್ಟಡ ಮತ್ತು ಕಾಮಗಾರಿಗಳ ವಿವರ, ಸಿಬ್ಬಂದಿ ವೆಚ್ಚ, ವಸ್ತುಗಳ ಖರೀದಿ ಮತ್ತು ನಿರ್ವಹಣೆ, ಲೆಕ್ಕ ಪತ್ರ ನಿರ್ವಹಣೆ, ಭಾರತೀಯ ವೈದ್ಯಕೀಯ ಮಂಡಳಿಯ ಕಾರ್ಯಕಲಾಪಗಳು, ಇಲಾಖ ನಿರ್ವಹಣೆ, ಶೈಕ್ಷಣಿಕ ವ್ಯವಹಾರಗಳ ಕಾರ್ಯಗಳು, ವಿದ್ಯಾರ್ಥಿಗಳ ಪ್ರವೇಶ, ಪರೀಕ್ಷೆ ಮತ್ತು ಅವರ ಕ್ಷೇಮ ಪಾಲನೆ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಾರೆ.

ಈ ಸಂಚಿತ ವೇತನದ ಸಿಬ್ಬಂದಿಗಳು ಆಡಳಿತದಲ್ಲಿ ಸಂಪೂರ್ಣ ಅನುಭವವನ್ನು ಹೊಂದಿದ್ದು, ಹಾಗು ಅವರಿಗೆ ವಹಿಸಿರುವ ಜವಾಬ್ದಾರಿಯನ್ನು ಚಾಚು ತಪ್ಪದೇ ಕೆಲಸಗಳನ್ನು ನೆರವೇರಿಸುತ್ತಿದ್ದಾರೆ. ಅವರ ಸೇವೆಯು ತೃಪ್ತಿಕರವಾಗಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ. ಆಕುಕ / 163 / ಎಂಎಂಇ / 2015 ದಿನಾಂಕ : 13.07.2015ರನ್ವಯ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ತತ್ಸಮಾನ ಹುದ್ದೆಯ ಮೂಲ ವೇತನ ರೂ. 100/– ಗಳನ್ನು ಕಡಿತಗೊಳಿಸಿ, ವೇತನ ನಿಗದಿಪಡಿಸುವ ಕುರಿತು ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಅನುಮೋದನೆ ಪಡೆಯಲಾಗಿದೆಯೇ ಎನ್ನುವ ಮಾಹಿತಿಯನ್ನು ನೀಡುವಂತೆ ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ. ಲಾ / 125 / ಎಲ್‌ಸಿಇ / 2012 ದಿನಾಂಕ 18.08.2012ರನ್ವಯ ನ್ಯಾಯಂಗ ಇಲಾಖೆಯಲ್ಲಿ ಸಂಚಿತ / ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಹುದ್ದೆಯ ಮೂಲ ವೇತನಕ್ಕೆ ರೂ. 100/– ಗಳನ್ನು ಕಡಿತಗೊಳಿಸಿ ಪಾವತಿಸಲಾಗುತ್ತಿದೆ.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರವು ಮಂಜೂರು ಮಾಡಿದ ಹುದ್ದೆಗಳಿಗೆ ವೇತನವನ್ನು ಬಿಡುಗಡೆ ಮಾಡುತ್ತಿರುವುದರಿಂದ, ಸದರಿ ಸಿಬ್ಬಂದಿಗಳಿಗೆ ಹುದ್ದೆಯ ಮೂಲ ವೇತನಕ್ಕೆ ರೂ. 100/– ಗಳನ್ನು ಕಡಿತಗೊಳಿಸಿ ಪಾವತಿಸಿದಲ್ಲಿ ಯಾವುದೇ ಆರ್ಥಿಕ ಹೊರೆ ಸರ್ಕಾರಕ್ಕಾಗಲಿ ಅಥವಾ ಸಂಸ್ಥೆಗಾಗಲಿ ಆಗುವುದಿಲ್ಲ.

ಕಾರಣ ಸರ್ಕಾರಿ ಆದೇಶ ಸಂಖ್ಯೆ ನಂ. ಆ.ಇ/7/ ಎಸ್‌ಆರ್‌ಪಿ /2012 ದಿನಾಂಕ 21.04.2012ರನ್ವಯ 6ನೇ ವೇತನ ಆಯೋಗವು ನಿಗದಿ ಪಡಿಸಿದ ಹುದ್ದೆಯ ಮೂಲವೇತನಕ್ಕೆ ರೂ. 100/–ನ್ನು ಕಡಿತಗೊಳಿಸಿ ದಿನಾಂಕ 01.02.2014ರಿಂದ ಅನ್ವಯವಾಗುವಂತೆ ರಿಮ್ಸ್ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ವೇತನವನ್ನು ನಿಗದಿಪಡಿಸಿ ಪರಿಷ್ಕೃತ ವೇತನವನ್ನು ಪಾವತಿಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

| ಕ್ರ ಸಂ | ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ಹಾಗೂ ಸಿಬ್ಬಂದಿಗಳ ಸಂಖ್ಯೆ | ಹುದ್ದೆಗೆ ನಿಗದಿ ಪಡಿಸಿರುವ ಮೂಲ ವೇತನ | ಪ್ರಸ್ತುತ ಸಿಬ್ಬಂದಿಗಳಿಗೆ ಪಾವತಿಸುತ್ತಿರುವ ವೇತನ (ಮೂಲ ವೇತನದ ಶೇ 75% ರಷ್ಟು) | ಕಾರ್ಯನಿರ್ವಹಿಸುತ್ತಿರುವ ಹುದ್ದೆಯ ಮೂಲ ವೇತನದ ರೂ. 100/–ಗಳನ್ನು ಕಡಿತ ಗೊಳಿಸಿ ಪಾವತಿಸುವಂತೆ ಸಿಬ್ಬಂದಿಗಳು ಕೋರಿರುವ ವೇತನದ ವಿವರ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗೆ ರೂ. 100/– ಗಳನ್ನು ಕಡಿತಗೊಳಿಸಿ ಪಾವತಿಸಿದಲ್ಲಿ ಆಗುವ ವೇತನದ ವಿವರ ಪ್ರತಿ ಸಿಬ್ಬಂದಿಗೆ | ಸಂಚಿತ ವೇತನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ | ಪ್ರತಿ ತಿಂಗಳಿಗೆ ಆಗುವ ಹೆಚ್ಚುವರಿ ಆರ್ಥಿಕ ವಿವರ | ಪ್ರತಿ ವರ್ಷಕ್ಕೆ ಆಗುವ ಹೆಚ್ಚುವರಿ ಆರ್ಥಿಕ ವಿವರ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | ವೈದ್ಯಕೀಯ ದಾಖಲಾತಿ ತಂತ್ರಜ್ಞರು – 03 | 14550 | 10912.50 | 14450.00 | 3637.50 | 03 | 10912.50 | 130950 |
| 2 | ಪ್ರಯೋಗಶಾಲ ತಂತ್ರಜ್ಞರು – 02 | 14550 | 10912.50 | 14450.00 | 3637.50 | 02 | 7275.00 | 87300 |
| 3 | ಕ್ಷ – ಕಿರಣ ತಂತ್ರಜ್ಞರು –02 | 14550 | 10912.50 | 14450.00 | 3637.50 | 02 | 7275.00 | 87300 |
| 4 | ಓ.ಟಿ ತಂತ್ರಜ್ಞರು – 04 | 14550 | 10912.50 | 14450.00 | 3637.50 | 04 | 14550.00 | 174600 |
| 5 | ಪ್ರಥಮ ದರ್ಜೆ ಸಹಾಯಕರು – 21 | 14550 | 10912.50 | 14450.00 | 3637.50 | 21 | 76387.50 | 916650 |
| 6 | ದ್ವಿತೀಯ ದರ್ಜೆ ಸಹಾಯಕರು – 01 | 11600 | 8700.00 | 11500.00 | 2900.00 | 01 | 2900.00 | 34800 |
| 7 | ಕಲಾವಿದ – 01 | 14550 | 10912.50 | 14450.00 | 3637.50 | 01 | 3637.50 | 43650 |
| 8 | ಸಹಾಯಕ ಗ್ರಂಥಪಾಲಕರು –02 | 14550 | 10912.50 | 14450.00 | 3637.50 | 02 | 7275.00 | 87300 |
| 9 | ದೈಹಿಕ ಶಿಕ್ಷಕರು –01 | 14550 | 10912.50 | 14450.00 | 3637.50 | 01 | 3637.50 | 43650 |
| 10 | ವಿದ್ಯುತ್ ಕರ್ಮಿಗಳು–02 | 11600 | 8700.00 | 11500.00 | 2900.00 | 02 | 5800.00 | 69600 |
| 11 | ಪ್ಲಂಬರ್ –02 | 11000 | 8250.00 | 10900.00 | 2750.00 | 02 | 5500.00 | 66000 |
| 12 | ವಾಹನ ಚಾಲಕರು –04 | 11600 | 8700.00 | 11500.00 | 2900.00 | 04 | 11600.00 | 139200 |
| 13 | ಅಟೆಂಡರ್ – 76 | 10400 | 7800.00 | 10300.00 | 2500.00 | 76 | 190000.00 | 2280000 |
| | | | | | | ಒಟ್ಟು | 346758.00 | 4161009.00 |

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಸಭೆಯ ತೀರ್ಮಾನ :-

ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಸಂಚಿತ / ಗುತ್ತಿಗೆ ವೇತನದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಗ್ರೂಪ್ ಸಿ ಹಾಗು ಗ್ರೂಪ್ ಡಿ ಸಿಬ್ಬಂದಿಗಳ ವೇತನ ತಾರತಮ್ಯ ಮತ್ತು ಸಿಬ್ಬಂದಿಗಳ ವೇತನವನ್ನು ಹೆಚ್ಚಿಸುವ ಸಂಬಂಧ ಈಗಾಗಲೇ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಸರ್ಕಾರಕ್ಕೆ ನೀಡುವ ಶಿಫಾರಸ್ಸಿನಂತೆ ವೇತನವನ್ನು ನಿಗದಿಪಡಿಸಿ ಪಾವತಿಸಲು ಆಡಳಿತ ಮಂಡಳಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 06 | ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ನೇರ ನೇಮಕಾತಿ ಹೊಂದಿದ ತುರ್ತು ಚಿಕಿತ್ಸಾ ವೈದ್ಯರ ತುರ್ತು ಚಿಕಿತ್ಸಾ ಭತ್ಯೆ ಮತ್ತು ಸ್ನಾತಕೋತ್ತರ / ವಿಶೇಷ ಭತ್ಯೆ / ಎಂಎಲ್‌ಸಿ ಭತ್ಯೆ ಪಾವತಿಸುವ ಕುರಿತು. |

ರಿಮ್ಸ್ ಸಂಸ್ಥೆಯ 4ನೇ ಆರ್ಥಿಕ ಸಮಿತಿ ಸಭೆಯಲ್ಲಿ 10 ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಅನುಮೋದನೆ ಪಡೆಯಲಾಗಿದ್ದು, ಆರ್ಥಿಕ ಸಮಿತಿ ಸಭೆಯ ನಿರ್ದೇಶನದಂತೆ, 10 ತುರ್ತುಚಿಕಿತ್ಸಾ ಘಟಕದ ವೈದ್ಯಾಧಿಕಾರಿ ಹುದ್ದೆಗಳನ್ನು ನಿಯಮಾನುಸಾರ ವೇತನ ಶ್ರೇಣಿ ರೂ. **(14050-22650)** ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಸರ್ಕಾರದ ಹಂತದಲ್ಲಿ ತುರ್ತು ನಿಘಾ ಘಟಕದ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ಮೂಲ ವೇತನಕ್ಕೆ ಸಂಬಂಧಿಸಿದ ಯಾವುದೇ ಸರ್ಕಾರಿ ಆದೇಶಗಳು ಇಲ್ಲದೇ ಇರುವುದರಿಂದ ಸಂಸ್ಥೆಯ ಬೈಲಾ ನಿರ್ದೇಶನದನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿ ಹುದ್ದೆಯ ವೇತನ ಶ್ರೇಣಿ **(14050-22650)** ಯನ್ನೇ **(Basic + DA +HRA)** ನಿಗದಿಪಡಿಸಿ ಪಾವತಿಸಲಾಗಿರುತ್ತದೆ. ಆದರೆ ಈ ವೇತನ ಶ್ರೇಣಿಯಲ್ಲಿ ಯಾವುದೇ ಇತರ ಭತ್ಯೆಗಳನ್ನು ನೀಡುತ್ತಿರುವುದಿಲ್ಲ.

ಆದರೆ ವೈದ್ಯಕೀಯ ಶಿಕ್ಷಣ ಇಲಾಖೆಯ ಬೆಂಗಳೂರು, ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ ಹಾಗೂ ಬೀದರ್ ವೈದ್ಯಕೀಯ ಕಾಲೇಜ್‌ಗಳಲ್ಲಿ ಮತ್ತು ಜಯದೇವ ಹೃದ್ರೋಗ ಸಂಸ್ಥೆ, ಎಸ್.ಡಿ.ಎಸ್ ಕ್ಷಯ ರೋಗ ಸಂಸ್ಥೆ, ಕಿದ್ವಾಯಿ ಸಂಸ್ಥೆ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ಪತ್ರೆಗಳಲ್ಲಿ ನೇರ ನೇಮಕಾತಿ ಹೊಂದಿದ ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳಿಗೆ ತುರ್ತು ಚಿಕಿತ್ಸಾ ಭತ್ಯೆ ಹಾಗೂ ಸ್ನಾತಕೋತ್ತರ ಭತ್ಯೆಗಳನ್ನು ಆಯಾ ವೈದ್ಯಕೀಯ ಕಾಲೇಜುಗಳಲ್ಲಿನ ಆಡಳಿತ ಮಂಡಳಿಯಲ್ಲಿ ಅನುಮೋದನೆಯನ್ನು ಪಡೆದು ಪಾವತಿಸಲಾಗುತ್ತಿದೆ. ಹೀಗಾಗಿ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಕರ್ತವ್ಯನಿರತ ತುರ್ತು ಚಿಕಿತ್ಸಾ ವೈದ್ಯರ ವೇತನದಲ್ಲಿ ತಾರತಮ್ಯವಿದ್ದು, ಅದನ್ನು ಸರಿಪಡಿಸಿ ಇತರ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಪಾವತಿಸುತ್ತಿರುವ ವೇತನದಂತೆ ರಿಮ್ಸ್ ಸಂಸ್ಥೆಯಲ್ಲಿರುವ ತುರ್ತು ಚಿಕಿತ್ಸಾ ವೈದ್ಯರಿಗೂ ಸಹ ಅದೇ ವೇತನ (ಸಮಾನವಾದ) ವನ್ನು ನೇಮಕಾತಿ ಹೊಂದಿದ ದಿನಾಂಕದಿಂದ ನಿಗದಿಪಡಿಸಿ ಪಾವತಿಸುವಂತೆ ಈ ಕಾರ್ಯಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ.

ಕಾರಣ ಬೆಂಗಳೂರು, ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ ಹಾಗೂ ಬೀದರ್ ವೈದ್ಯಕೀಯ ಕಾಲೇಜ್‌ಗಳಲ್ಲಿ ಮತ್ತು ಜಯದೇವ ಹೃದ್ರೋಗ ಸಂಸ್ಥೆ, ಎಸ್.ಡಿ.ಎಸ್ ಕ್ಷಯ ರೋಗ ಸಂಸ್ಥೆ, ಕಿದ್ವಾಯಿ ಸಂಸ್ಥೆ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ಪತ್ರೆಗಳಲ್ಲಿ ನೇರ ನೇಮಕಾತಿ ಹೊಂದಿದ ತುರ್ತು ಚಿಕಿತ್ಸಾ ವೈದ್ಯರುಗಳ ವೇತನ, ಸ್ನಾತಕೋತ್ತರ ಭತ್ಯೆ ಹಾಗೂ ಇನ್ನಿತರ ಭತ್ಯೆಗಳನ್ನು ಪಾವತಿಸುತ್ತಿರುವಂತೆ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳಿಗೂ ಸಹ ವೇತನ ಹಾಗೂ ಇತರ ಭತ್ಯೆಗಳನ್ನು ನೇಮಕಾತಿ ಹೊಂದಿದ ದಿನಾಂಕದಿಂದ ನಿಗದಿಪಡಿಸಿ ಪಾವತಿಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಸಭೆಯ ತೀರ್ಮಾನ :–

ರಾಜ್ಯದ ಎಲ್ಲಾ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತುರ್ತು ನಿಘಾ ಘಟಕದ ವೈದ್ಯಾಧಿಕಾರಿಗಳ ಹುದ್ದೆಯ ಮೂಲ ವೇತನ ಹಾಗೂ ಇತರ ಭತ್ಯೆಗಳ ನಿಗದಿ ಸಂಬಂಧ ಸರ್ಕಾರದಿಂದ ಯಾವುದೇ ಆದೇಶವಿಲ್ಲದ ಕಾರಣ ಆಯಾ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು ತುರ್ತು ನಿಘಾ ಘಟಕದ ವೈದ್ಯಾಧಿಕಾರಿಗಳ ವೇತನವನ್ನು ನಿಗದಿಪಡಿಸಲಾಗಿದೆ. ಆದರೆ ಈ ವೇತನ ಹಾಗೂ ಇತರ ಭತ್ಯೆಗಳು ಕಾಲೇಜಿನಿಂದ ಕಾಲೇಜಿಗೆ ವಿಭಿನ್ನವಾಗಿದ್ದು, ಈ ಹಿನ್ನಲೆಯಲ್ಲಿ ತುರ್ತು ನಿಘಾ ಘಟಕದ ವೈದ್ಯಾಧಿಕಾರಿಗಳಿಗೆ ಏಕರೂಪದ ಮೂಲ ವೇತನ ಹಾಗೂ ಇತರ ಭತ್ಯೆಗಳನ್ನು ನಿಗದಿಪಡಿಸುವ ಸಂಬಂಧ ಎಲ್ಲಾ ವೈದ್ಯಕೀಯ ಕಾಲೇಜುಗಳಿಂದ ಸಂಪೂರ್ಣ ಮಾಹಿತಿ ಪಡೆದು ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಆಡಳಿತ ಮಂಡಳಿಯು ನಿರ್ದೇಶನ ನೀಡಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 07 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ವೇತನ ತಾರತಮ್ಯ ಸರಿಪಡಿಸುವ ಬಗ್ಗೆ. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳು ವೈದ್ಯಕೀಯ ಶಿಕ್ಷಣ ಇಲಾಖೆ ಅಡಿಯಲ್ಲಿ ಬರುವ 13 ಸರ್ಕಾರಿ ಸ್ವಾಯತ್ತ ಸಂಸ್ಥೆಗಳ ಪೈಕಿ 12 ಸ್ವಾಯತ್ತ ಸಂಸ್ಥೆಗಳಲ್ಲಿ ಸರ್ಕಾರದ ಆದೇಶದಂತೆ ಎಐಸಿಟಿಸಿ ವೇತನವನ್ನು ನಿಗದಿಪಡಿಸಿದ್ದು, ಆದರೆ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಮಾತ್ರ ನಿಗದಿಪಡಿಸಿರುವುದಿಲ್ಲವೆಂದು ಹಾಗೂ ಇದು ವೇತನ ತಾರತಮ್ಯಕ್ಕೆ ಎಡೆ ಮಾಡಿದ್ದು ರಿಮ್ಸ್ ಬೋಧಕ ವೃಂದದ ಸಿಬ್ಬಂದಿಗಳಿಗೆ ಅನ್ಯಾಯವಾಗಿದೆಯೆಂದು ತಿಳಿಸಿ, ದಿನಾಂಕ 23.01.2016 ರಂದು ಈ ಕಾರ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ. ಆಕುಕ / 04 /ಎಂಎಂಸಿ / 2010 ದಿನಾಂಕ 16.12.2011 ರನ್ವಯ ದಿನಾಂಕ 01.04.2011 ರ ಪೂರ್ವದಲ್ಲಿ ನೇಮಕಾತಿ ಹೊಂದಿ ಬೋಧಕ ಸಿಬ್ಬಂದಿಗಳಿಗೆ ಎಐಸಿಟಿಸಿ ವೇತನವನ್ನು ನಿಗದಿಪಡಿಸಲಾಗಿದ್ದು, ಈ ಆದೇಶದ ಅನುಸಾರವಾಗಿ ರಿಮ್ಸ್ ಸಂಸ್ಥೆಯಲ್ಲಿ ವೇತನವನ್ನು ಪಾವತಿಸಲಾಗುತ್ತಿದೆ. ಆದರೆ ದಿನಾಂಕ 01.04.2011 ರ ನಂತರ ನೇಮಕಾತಿ ಹೊಂದಿದ ಬೋಧಕ ಸಿಬ್ಬಂದಿಗಳಿಗೆ ಸರ್ಕಾರದ ಆದೇಶ ಸಂಖ್ಯೆ. ಆಕುಕ / 94 ಎಂಎಂಸಿ / 2012 ದಿನಾಂಕ 23.02.2013 ರನ್ವಯ ಎಐಸಿಟಿಸಿ ಪರಿಷ್ಕೃತ ವೇತನವನ್ನು ನಿಗದಿಪಡಿಸಿದ್ದು, ಈ ಆದೇಶವು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಪಾಲನೆಯಾಗಿಲ್ಲವೆಂದು ತಿಳಿಸಿರುತ್ತಾರೆ.

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳು ಈ ವೇತನ ತಾರತಮ್ಯವನ್ನು ಸರಿಪಡಿಸಿ, ಇತರ ಸ್ವಾಯತ್ತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಪಾವತಿಸುತ್ತಿರುವ ವೇತನದಂತೆ ಈ ಸಂಸ್ಥೆಯಲ್ಲಿಯೂ ಸಹ ಪಾವತಿಸುವ ಬಗ್ಗೆ ಆಡಳಿತ ಮಂಡಳಿಯ ಮಾರ್ಗದರ್ಶನ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಎಲ್ಲಾ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ವೇತನ ತಾರತಮ್ಯವನ್ನು ನಿವಾರಣೆ ಮಾಡುವ ಸಂಬಂಧ ಸರ್ಕಾರದ ಹಂತದಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಸರ್ಕಾರಕ್ಕೆ ನೀಡುವ ಶಿಫಾರಸ್ಸಿನಂತೆ ಬೋಧಕ ಸಿಬ್ಬಂದಿಗಳ ವೇತನವನ್ನು ನಿಗದಿಪಡಿಸಿ ಪಾವತಿಸಲು ಆಡಳಿತ ಮಂಡಳಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

| | | |
|---|---|---|
| (ಡಾ.ಕವಿತಾ ಪಾಟೀಲ್)<br>ನಿರ್ದೇಶಕರು,<br>ರಿಮ್ಸ್, ರಾಯಚೂರು<br>ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ರಿಮ್ಸ್ ಆಡಳಿತ ಮಂಡಳಿ ಸಭೆ,<br>ರಾಯಚೂರು | (ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆಕುಕ, ವೈದ್ಯಕೀಯ ಶಿಕ್ಷಣ,<br>ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ<br>ಮಂಡಳಿ ಸಭೆ, ರಾಯಚೂರು | (ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),<br>ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ<br>ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,<br>ರಿಮ್ಸ್, ರಾಯಚೂರು |

| | |
|---|---|
| ವಿಷಯ ಸೂಚಿ ಸಂಖ್ಯೆ – 08 | ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಟ್ಯೂಟರ್‌ಗಳ ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡುವ ಬಗ್ಗೆ. |

ಪ್ರಾರಂಭದಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ ಮೊದಲನೇ ಹಂತದ ನವೀಕರಣಕ್ಕೆ ಬೇಕಾದಂತಹ ಅವಶ್ಯ ಬೋಧಕ ಸಿಬ್ಬಂದಿಗಳನ್ನು ಜನವರಿ 2007 ರಿಂದ ನೇಮಿಸಿಕೊಳ್ಳಲಾಗಿತ್ತು. ಸದರಿ ವೈದ್ಯರುಗಳು ಸಂಸ್ಥೆಯ ಪ್ರಾರಂಭದಿಂದಲೂ ದಂತ ಚಿಕಿತ್ಸಾ ವಿಭಾಗ ಹಾಗೂ ಕಿವಿ ಮೂಗು ಮತ್ತು ಗಂಟಲು ವಿಭಾಗದಲ್ಲಿ ಟ್ಯೂಟರ್ ಆಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ. ಆಕುಕ / 320 / ಎಂಎಂಸಿ / ದಿನಾಂಕ 16.10.2012 ಪುಟ 4ರಲ್ಲಿ 19.05.2007ಕ್ಕಿಂತ ಮೊದಲು ಸೇವೆಗೆ ಸೇರಿರುವ ಟ್ಯೂಟರ್‌ಗಳಿಗೆ ಎಐಸಿಟಿಇ ವೇತನವನ್ನು ನಿಗದಿ ಪಡಿಸಲಾಗಿದೆ. ಹಾಗೂ ದಿನಾಂಕ 19.05.2007ಕ್ಕಿಂತ ಮುಂಚೆ ಸೇವೆಗೆ ಸೇರಿದ ಟ್ಯೂಟರ್‌ಗಳನ್ನು ಖಾಯಂ ಟ್ಯೂಟರ್‌ಗಳೆಂದು ಪರಿಗಣಿಸಲು ಸೂಚಿಸಿದ ಪ್ರಯುಕ್ತ ಪ್ರಸ್ತಾವನೆಯನ್ನು ಏಕ ಕಡತದಲ್ಲಿ ಸರ್ಕಾರಕ್ಕೆ ಸಲ್ಲಿಸಿ, ಅನುಮೋದನೆ ಪಡೆದ ನಂತರ ಈ ಕೆಳಕಂಡ ಟ್ಯೂಟರ್‌ಗಳಿಗೆ ದಿನಾಂಕ 01.04.2011ರಿಂದ ಪೂರ್ವಾನ್ವಯವಾಗುವಂತೆ ಕಾರ್ಯದೇಶಗಳನ್ನು ನೀಡಿ ನೇಮಕಾತಿ ಮಾಡಿಕೊಳ್ಳಲಾಗಿದೆ.

ನೇಮಕಾತಿ ಮಾಡಿಕೊಂಡ ಟ್ಯೂಟರ್‌ಗಳ ವಿವರ ಈ ಕೆಳಗಿನಂತಿದೆ

| ಕ್ರಮ ಸಂಖ್ಯೆ | ವೈದ್ಯರ ಹೆಸರು | ಪದನಾಮ | ವಿಭಾಗ | ಕರ್ತವ್ಯಕ್ಕೆ ಹಾಜರಾದ ದಿನಾಂಕ |
|---|---|---|---|---|
| 1 | ಡಾ. ಶಾಮಣ್ಣ | ಟ್ಯೂಟರ್ | ದಂತ ಚಿಕಿತ್ಸಾ ವಿಭಾಗ | ಫೆಬ್ರವರಿ 2007 |
| 2 | ಡಾ. ಮೂಲಿಮನಿ ಬಾಪುಗೌಡ | ಟ್ಯೂಟರ್ | ದಂತ ಚಿಕಿತ್ಸಾ ವಿಭಾಗ | ಫೆಬ್ರವರಿ 2007 |
| 3 | ಡಾ. ವೀರಭದ್ರ ಗದ್ವಾಲ್ | ಟ್ಯೂಟರ್ | ಕಿವಿ ಮೂಗು ಮತ್ತು ಗಂಟಲು ತಜ್ಞ ವಿಭಾಗ | 18.05.2007 |

ನೇಮಕಾತಿ ಮಾಡಿಕೊಂಡಿರುವ ಪ್ರಕ್ರಿಯೆಯ ಬಗ್ಗೆ ದಿನಾಂಕ 12.05.2014ರಂದು ಜರುಗಿದ ರಿಮ್ಸ್ ಸಂಸ್ಥೆಯ 19ನೇ ಆಡಳಿತ ಮಂಡಳಿ ಸಭೆಯಲ್ಲಿ ಸದರಿ ವಿಷಯವನ್ನು ಮಂಡಿಸಲಾಗಿ ಆಡಳಿತ ಮಂಡಳಿಯು ಈ ಕೆಳಗಿನಂತೆ ಅನುಮೋದನೆಯನ್ನು ನೀಡಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ. ಆಕುಕ / 320 / ಎಂಎಂಸಿ / ದಿನಾಂಕ 16.10.2012 ರನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ದಿನಾಂಕ 19.05.2007ಕ್ಕಿಂತ ಮೊದಲು ನೇಮಕಾತಿ ಹೊಂದಿರುವ 3 ಟ್ಯೂಟರ್‌ಗಳನ್ನು ಖಾಯಂ ನೇಮಕಾತಿ ಮಾಡಿರುವ ಬಗ್ಗೆ ಆಡಳಿತ ಮಂಡಳಿಯು ಪರಿಶೀಲಿಸಿ ಘಟನೋತ್ತರ ಅನುಮೋದನೆ ನೀಡಿತು.

ಪ್ರಸ್ತುತ ದಂತ ಚಿಕಿತ್ಸಾ ಹಾಗೂ ಕಿವಿ ಮೂಗು ಮತ್ತು ಗಂಟಲು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಟ್ಯೂಟರ್‌ಗಳು ಪ್ರಸ್ತುತ 05 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ್ದು, ಕರ್ನಾಟಕ ನಾಗರೀಕ ಸೇವಾ ನಿಯಾಮವಳಿಯಂತೆ ನಿಗದಿತ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡಿದ್ದು, ಹಾಗೂ ಎರಡು ವರ್ಷದ ಕಾರ್ಯನಿರ್ವಾಹಣಾ ವರದಿಯಲ್ಲಿ ಯಾವುದೇ ಪ್ರತಿಕೂಲ ಷರಾ ಇರುವುದಿಲ್ಲ.

ಕಾರಣ ದಂತ ಚಿಕಿತ್ಸಾ ಹಾಗೂ ಕಿವಿ ಮೂಗು ಮತ್ತು ಗಂಟಲು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಶಾಮಣ್ಣ, ಡಾ. ಮೂಲಿಮನಿ ಬಾಪುಗೌಡ ಮತ್ತು ಡಾ. ವೀರಭದ್ರ ಗದ್ವಾಲ್ ಇವರ ಖಾಯಂ ಪೂರ್ವಸೇವಾವಧಿಯನ್ನು ಘೋಷಣೆ ಮಾಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮಿನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಸಭೆಯ ತೀರ್ಮಾನ :-

ಸರ್ಕಾರದ ಆದೇಶ ಸಂಖ್ಯೆ. ಆಕುಕ / 320 / ಎಂಎಂಸಿ / ದಿನಾಂಕ 16.10.2012 ರನ್ವಯ ದಂತ ಚಿಕಿತ್ಸಾ ವಿಭಾಗ ಹಾಗೂ ಕಿವಿ ಮೂಗು ಮತ್ತು ಗಂಟಲು ವಿಭಾಗದಲ್ಲಿ ಖಾಯಂ ನೇಮಕಾತಿ ಹೊಂದಿ ಕಾರ್ಯನಿರ್ವಹಿಸುತ್ತಿರುವ ಬೋಧಕರು / ಕಿರಿಯ ಸ್ಥಾನಿಕರಾದ ಡಾ. ಶಾಮಣ್ಣ, ಡಾ. ಮೂಲಿಮನಿ ಬಾಮುಗೌಡ ಮತ್ತು ಡಾ. ವೀರಭದ್ರ ಗದ್ವಾಲ್ ಇವರ ಖಾಯಂ ಪೂರ್ವಸೇವಾವಧಿಯನ್ನು ಘೋಷಣೆ ಮಾಡಲು ಆಡಳಿತ ಮಂಡಳಿಯು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ<br>ಸಂಖ್ಯೆ. 09 | ಡಾ. ಅನಿಲ್‌ಕುಮಾರ ಡಿ.ಎನ್, ಸಹಾಯಕ ಪ್ರಾಧ್ಯಾಪಕರು ಇವರಿಗೆ ಉನ್ನತ ಶಿಕ್ಷಣ ವ್ಯಾಸಂಗಕ್ಕಾಗಿ ಅಸಾಧಾರಣ ರಜೆಯನ್ನು ಮಂಜೂರು ಮಾಡಿರುವ ಬಗ್ಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು. |

ಡಾ. ಅನಿಲ್‌ಕುಮಾರ್. ಡಿ.ಎನ್ ಇವರು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ದಿನಾಂಕ 18.10.2010 ರಂದು ಎಲುಬು ಮತ್ತು ಕೀಲು ವಿಭಾಗದ ಹಿರಿಯ ಸ್ಥಾನಿಕರ ಹುದ್ದೆಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಸದರಿ ಸಿಬ್ಬಂದಿಯವರ ಖಾಯಂಪೂರ್ವ ಸೇವಾವಧಿಯನ್ನು ದಿನಾಂಕ 17.10.2012ಕ್ಕೆ ತೃಪ್ತಿಕರವಾಗಿ ಪೂರೈಸಿರುತ್ತಾರೆ.

ಎಲುಬು ಮತು ಕೀಲು ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಯು ಖಾಲಿಯಿದ್ದುದರಿಂದ ಹಾಗೂ ಭಾರತೀಯ ವೈದ್ಯಕೀಯ ಮಂಡಳಿಯು ಯಾವುದೇ ಸಮಯದಲ್ಲಿ ಭೇಟಿ ನೀಡುವ ಸಾಧ್ಯತೆಯಿದುದ್ದರಿಂದ ಮತ್ತು ಡಾ. ಅನಿಲ್‌ಕುಮಾರ್ ಇವರು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಬೇಕಾದ ವಿದ್ಯಾರ್ಹತೆಯನ್ನು ಹೊಂದಿದ್ದರಿಂದ, ದಿನಾಂಕ 25.10.2013 ರಂದು ಜರುಗಿದ ಈ ಸಂಸ್ಥೆಯ ಇಲಾಖಾ ಪದೋನ್ನತಿ ಸಮಿತಿ ಸಭೆಯ ಅನುಮೋದನೆ ಮೇರೆಗೆ ಸದರಿ ವೈದ್ಯರಿಗೆ ಹಿರಿಯ ಸ್ಥಾನಿಕರ ಹುದ್ದೆಯಿಂದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಮರು ಪದನಾಮಿಕರಿಸಿ **(Re-Designation)** ನೇಮಕಾತಿಯನ್ನು ಮಾಡಲಾಗಿರುತ್ತದೆ.

ಡಾ. ಅನಿಲ್‌ಕುಮಾರ್.ಡಿ.ಎನ್ ಇವರು ದಿನಾಂಕ 14.11.2015 ರಂದು ಈ ಕಾರ್ಯಲಯಕ್ಕೆ ಮನವಿಯನ್ನು ಸಲ್ಲಿಸಿ, ಡಾ. ಎಂ.ಜಿ.ಆರ್ ವೈದ್ಯಕೀಯ ವಿಶ್ವವಿದ್ಯಾಲಯ, ಚನ್ನೈನಲ್ಲಿ **Post Doctoral Fellowship in Spine Surgery** ಗೆ ಮೆರಿಟ್‌ನಲ್ಲಿ ಆಯ್ಕೆಯಾಗಿದ್ದು, ಜನವರಿ 2016 ರಿಂದ ಜನವರಿ 2018 ರವರೆಗೆ ಎರಡು ವರ್ಷಗಳ ಕಾಲ ಅಸಾಧಾರಣ ರಜೆ ಮಂಜೂರು ಮಾಡಲು ಅನುಮತಿಯನ್ನು ನೀಡುವಂತೆ ಕೋರಿದ್ದರು. ಈ ಹಿನ್ನಲೆಯಲ್ಲಿ ಈ ಕಾರ್ಯಲಯದ ಪತ್ರ ಸಂಖ್ಯೆ. ರಿಮ್ಸ್ / ಆಡಳಿತ / 2015-16 / 2511 ದಿನಾಂಕ 25.11.2015 ರನ್ವಯ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಪತ್ರ ಸಂಖ್ಯೆ. ಆಕುಕ / 10115 / ಎಂಇ / 2015 ದಿನಾಂಕ 31.12.2015 ರನ್ವಯ ಡಾ. ಅನಿಲ್‌ಕುಮಾರ್.ಡಿ.ಎನ್, ಸಹಾಯಕ ಪ್ರಾಧ್ಯಾಪಕರು ಇವರಿಗೆ ಡಾ. ಎಂ.ಜಿ.ಆರ್ ವೈದ್ಯಕೀಯ ವಿಶ್ವ ವಿದ್ಯಾಲಯ, ಚನ್ನೈನಲ್ಲಿ 2 ವರ್ಷಗಳ ಬೆನ್ನುಹುರಿ ಶಸ್ತ್ರ ಚಿಕಿತ್ಸೆಯ ಸ್ನಾತಕೋತ್ತರ ಫೆಲೋಶಿಪ್ ಕೋರ್ಸ್‌ನ್ನು ಪೂರ್ಣಗೊಳಿಸುವ ಸಲುವಾಗಿ 02 ವರ್ಷಗಳ ಅಸಾಧರಣ ರಜೆಯನ್ನು ಮಂಜೂರು ಮಾಡಲಾಗಿರುತ್ತದೆ.

ಸರ್ಕಾರದ ಅನುಮೋದನೆಯಂತೆ ಡಾ. ಅನಿಲ್‌ಕುಮಾರ್.ಡಿ.ಎನ್, ಸಹಾಯಕ ಪ್ರಾಧ್ಯಾಪಕರು ಇವರಿಗೆ ಡಾ. ಎಂ.ಜಿ.ಆರ್ ವೈದ್ಯಕೀಯ ವಿಶ್ವ ವಿದ್ಯಾಲಯ, ಚನ್ನೈನಲ್ಲಿ 2 ವರ್ಷಗಳ ಬೆನ್ನುಹುರಿ ಶಸ್ತ್ರ ಚಿಕಿತ್ಸೆಯ ಸ್ನಾತಕೋತ್ತರ ಫೆಲೋಶಿಪ್ ಕೋರ್ಸ್‌ನ್ನು ಪೂರ್ಣಗೊಳಿಸುವ ಸಲುವಾಗಿ 02 ವರ್ಷಗಳ ಅಸಾಧರಣ ರಜೆಯನ್ನು ಮಂಜೂರು ಮಾಡಿರುವ ಬಗ್ಗೆ ಘಟನೋತ್ತರ ಅನುಮೋದನೆ ಕೋರಿ ಸಲ್ಲಿಸಿದೆ

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಡಾ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಸಭೆಯ ತೀರ್ಮಾನ :-

ಡಾ. ಅನಿಲ್‌ಕುಮಾರ್.ಡಿ.ಎಸ್, ಸಹಾಯಕ ಪ್ರಾಧ್ಯಾಪಕರು ಇವರಿಗೆ ಎಂ.ಜಿ.ಆರ್ ವೈದ್ಯಕೀಯ ವಿಶ್ವ ವಿದ್ಯಾಲಯ, ಚನ್ನೈನಲ್ಲಿ 2 ವರ್ಷಗಳ ಬೆನ್ನುಹುರಿ ಶಸ್ತ್ರ ಚಿಕಿತ್ಸೆಯ ಸ್ನಾತಕೋತ್ತರ ಫೆಲೋಶಿಪ್ ಕೋರ್ಸ್‌ನ್ನು ಪೂರ್ಣಗೊಳಿಸುವ ಸಂಬಂಧ 02 ವರ್ಷಗಳ ಅಸಾಧರಣ ರಜೆಯನ್ನು ಮಂಜೂರು ಮಾಡಿರುವ ಬಗ್ಗೆ ಆಡಳಿತ ಮಂಡಳಿಯು ಪರಿಶೀಲಿಸಿ ಘಟನೋತ್ತರ ಅನುಮೋದನೆ ನೀಡಲಾಯಿತು.

ಹಾಗೂ ಡಾ. ಅನಿಲ್‌ಕುಮಾರ್.ಡಿ.ಎಸ್, ಸಹಾಯಕ ಪ್ರಾಧ್ಯಾಪಕರು ಇವರಿಂದ ಕನಿಷ್ಠ ಐದು ವರ್ಷಗಳವರೆಗೆ ಇದೇ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತೇನೆಂಬ ಮುಚ್ಚಳಿಕೆ (ಬಾಂಡ್) ಪತ್ರ ಪಡೆದುಕೊಳ್ಳಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು. ಒಂದು ವೇಳೆ ಸದರಿ ಸಿಬ್ಬಂದಿಯು ಬಾಂಡ್ ನೀಡಲು ನಿರಾಕರಿಸಿದಲ್ಲಿ **Terminate** ಮಾಡುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ನಿರ್ದೇಶನ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 10 | ಡಾ. ರಮೇಶ್ ಸಾಗರ್, ಸಹಾಯಕ ಪ್ರಾಧ್ಯಾಪಕರು, ಶಸ್ತ್ರ ಚಿಕಿತ್ಸಾ ವಿಭಾಗ ಇವರಿಗೆ ಡಿಎನ್‌ಬಿ ವ್ಯಾಸಂಗ ಮಾಡಲು ಮಂಜೂರು ಮಾಡಲಾದ ರಜೆಯನ್ನು ರದ್ದುಗೊಳಿಸಿರುವ ಬಗ್ಗೆ. |

ಡಾ. ರಮೇಶ್ ಸಾಗರ್ ಇವರು ದಿನಾಂಕ 27.03.2010 ರಂದು ಶಸ್ತ್ರ ಚಿಕಿತ್ಸಾ ವಿಭಾಗದ ಹಿರಿಯ ಸ್ಥಾನಿಕರ ಹುದ್ದೆಗೆ ಕರ್ತವ್ಯ ಮಾಡಿಕೊಂಡಿದ್ದು, ದಿನಾಂಕ 13.08.2013ಕ್ಕೆ ಎರಡು ವರ್ಷಗಳ ಖಾಯಂ ಪೂರ್ವ ಸೇವಾವಾಧಿಯನ್ನು ಪೂರ್ಣಗೊಳಿಸಿರುತ್ತಾರೆ.

ಶಸ್ತ್ರ ಚಿಕಿತ್ಸಾ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಯು ಖಾಲಿಯಿದ್ದುದರಿಂದ ಹಾಗೂ ಭಾರತೀಯ ವೈದ್ಯಕೀಯ ಮಂಡಳಿಯು ಯಾವುದೇ ಸಮಯದಲ್ಲಿ ಭೇಟಿ ನೀಡುವ ಸಾಧ್ಯತೆಯಿದುದ್ದರಿಂದ ಮತ್ತು ಡಾ. ರಮೇಶ್ ಸಾಗರ್ ಇವರು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಬೇಕಾದ ವಿದ್ಯಾರ್ಹತೆಯನ್ನು ಹೊಂದಿದ್ದರಿಂದ, ದಿನಾಂಕ 04.12.2014 ರಂದು ಜರುಗಿದ ಈ ಸಂಸ್ಥೆಯ ಇಲಾಖಾ ಪದೋನ್ನತಿ ಸಮಿತಿ ಸಭೆಯ ಅನುಮೋದನೆ ಮೇರೆಗೆ ಸದರಿ ವೈದ್ಯರಿಗೆ ಹಿರಿಯ ಸ್ಥಾನಿಕರ ಹುದ್ದೆಯಿಂದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಮರು ಪದನಾಮೀಕರಿಸಿ **(Re-Designation)** ನೇಮಕಾತಿಯನ್ನು ಮಾಡಲಾಗಿರುತ್ತದೆ.

ಡಾ. ರಮೇಶ್ ಸಾಗರ್ ಇವರು ದಿನಾಂಕ 05.03.2015 ರಂದು ಈ ಕಾರ್ಯಲಯಕ್ಕೆ ಮನವಿಯನ್ನು ಸಲ್ಲಿಸಿ, **National Board of Examinations of Government of India** ವತಿಯಿಂದ **DNB – Supersepciality –Neuro Surgery at Yashoda Hospital, Hyderabad** ನಲ್ಲಿ ಮೆರಿಟ್‌ನಲ್ಲಿ ಆಯ್ಕೆಯಾಗಿದ್ದು, ಮೂರು ವರ್ಷಗಳ ಕಾಲ ನ್ಯೂರೋ ಸರ್ಜರಿ ವ್ಯಾಸಂಗ ಮಾಡಲು ಅನುಮತಿಯನ್ನು ನೀಡುವಂತೆ ಕೋರಿದ್ದರು. ಈ ಹಿನ್ನಲೆಯಲ್ಲಿ ಈ ಕಾರ್ಯಲಯದ ಪತ್ರ ಸಂಖ್ಯೆ. ರಿಮ್ಸ್ / ಆಡಳಿತ / 2014–15 / 2046 ದಿನಾಂಕ 17.03.2015 ರನ್ವಯ ಏಕ ಕಡತದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸರ್ಕಾರದಿಂದ ಕಡತವು ಅನುಮೋದನೆಗೊಂಡ ನಂತರ ಸದರಿ ವೈದ್ಯರಿಗೆ ಈ ಕಾರ್ಯಲಯದ ವತಿಯಿಂದ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿತ್ತು.

ರಾಷ್ಟ್ರಿಯ ಪರೀಕ್ಷಾ ಮಂಡಳಿ ಪತ್ರ ಸಂಖ್ಯೆ. ದಿನಾಂಕ 03.08.2015 ರನ್ವಯ ನ್ಯೂರೋ ಸರ್ಜರಿ ಕೋರ್ಸ್‌ನ್ನು ರದ್ದು ಪಡಿಸಿದ ಹಿನ್ನಲೆಯಲ್ಲಿ ದಿನಾಂಕ 28.08.2015 ರಂದು ಡಾ. ರಮೇಶ್, ಸಹಾಯಕ ಪ್ರಾಧ್ಯಾಪಕರು ಇವರು ಮಂಜೂರು ಮಾಡಲಾದ ರಜೆಯನ್ನು ರದ್ದುಪಡಿಸುವಂತೆ ಹಾಗೂ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅನುಮತಿ ನೀಡುವಂತೆ ಕೋರಿರುತ್ತಾರೆ. ಆದರೆ ಸದರಿ ವೈದ್ಯರು 90 ದಿನಗಳ ಕಾಲ ರಜೆಯನ್ನು ಬಳಕೆ ಮಾಡಿಕೊಂಡು ಪುನಃ ಕರ್ತವ್ಯಕ್ಕೆ ವಸರಿ ಮಾಡಿಕೊಂಡಿರುತ್ತಾರೆ. ಸಂಸ್ಥೆಯ ಬೈಲಾ ನಿಯಮ (9)ರ ಕ್ರಮ ಸಂಖ್ಯೆ. 20ರನ್ವಯ ಸಂಸ್ಥೆಯ ನಿರ್ದೇಶಕರಿಗೆ ಗರಿಷ್ಠ 90 ದಿನಗಳ ರಜೆಯನ್ನು ಮಂಜೂರು

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಮಾಡಲು ಅವಕಾಶ ಕಲ್ಪಿಸಿದ್ದು, 90 ದಿನಗಳು ಮೇಲ್ಪಟ್ಟಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಾಮವಳಿಗಳನ್ವಯ ಸರ್ಕಾರದ ಅನುಮೋದನೆ ಪಡೆದು ದೀರ್ಘಾವಧಿ ರಜೆಯನ್ನು ಮಂಜೂರು ಮಾಡಬೇಕಾಗಿರುತ್ತದೆ.

ಕಾರಣ ಡಾ. ರಮೇಶ್ ಸಾಗರ್, ಸಹಾಯಕ ಪ್ರಾಧ್ಯಾಪಕರು ಇವರು ದಿನಾಂಕ 01.04.2015 ರಿಂದ ದಿನಾಂಕ 27.08.2015 ರವರೆಗಿನ ಧೀರ್ಘಾವಧಿ ರಜೆಯನ್ನು ಬಳಕೆ ಮಾಡಿಕೊಂಡಿರುವ ಬಗ್ಗೆ ಹಾಗೂ ಈ ರಜೆಯನ್ನು ಸಕ್ರಮಗೊಳಿಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಬೋಧಕ ಸಿಬ್ಬಂದಿಗಳ ಕೊರತೆಯಿರುವುದರಿಂದ, ಹಾಗು ಡಾ. ರಮೇಶ್ ಸಾಗರ್, ಸಹಾಯಕ ಪ್ರಾಧ್ಯಾಪಕರು ಇವರ ಇದೇ ಸಂಸ್ಥೆಯಲ್ಲಿ ಸೇವೆಯನ್ನು ಸಲ್ಲಿಸಲು ಇಚ್ಚಿಸಿರುವುದರಿಂದ ಸದರಿಯವರ ಸೇವೆಯನ್ನು ಪರಿಗಣಿಸಿ, ದಿನಾಂಕ 01.04.2015 ರಿಂದ ದಿನಾಂಕ 27.08.2015 ರವರೆಗಿನ ಧೀರ್ಘಾವಧಿ ರಜೆಯನ್ನು ಬಳಕೆ ಮಾಡಿಕೊಂಡಿರುವ ಆಡಳಿತ ಮಂಡಳಿಯು ಪರಿಶೀಲಿಸಿ, ಈ ರಜೆಯನ್ನು ಸಕ್ರಮಗೊಳಿಸಿಕೊಳ್ಳಲು ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 11 | ಡಾ. ಶರಣಬಸವರಾಜ್, ತುರ್ತು ನಿಘಾ ಘಟಕದ ವೈದ್ಯಾಧಿಕಾರಿಗಳು ಇವರಿಗೆ ಉನ್ನತ ವ್ಯಾಸಂಗದ ರಜೆಯನ್ನು ಮಂಜೂರು ಮಾಡುವ ಬಗ್ಗೆ. |

ಡಾ. ಶರಣ ಬಸವರಾಜ್ ಇವರು ಕಳೆದ ಐದು ವರ್ಷಗಳಿಂದ (ದಿನಾಂಕ 01.06.2008 ರಿಂದ 12.10.2010ರವರೆಗೆ ಮಾನಸಿಕ ವಿಭಾಗದಲ್ಲಿ ಕಿರಿಯ ಸ್ಥಾನಿಕರಾಗಿ ಹಾಗೂ ದಿನಾಂಕ 13.10.2010 ರಿಂದ ದಿನಾಂಕ 01.06.2013ರವರೆಗೆ ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳಾಗಿ) ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪ್ರಸಕ್ತ 2013ನೇ ಸಾಲಿನ ಸ್ನಾತಕೋತ್ತರ ಪದವಿ ಕೌನ್ಸಿಲಿಂಗ್‌ನಲ್ಲಿ ಎಂ.ಡಿ (ಮಾನಸಿಕ ವಿಭಾಗ) ಸೀಟು ದೊರಕಿದ್ದು, ಉನ್ನತ ವ್ಯಾಸಂಗಕ್ಕೆ ಹೋಗಲು ಅನುಮತಿ ನೀಡುವಂತೆ ಕೋರಿ ಹಾಗೂ ಸ್ನಾತಕೋತ್ತರ ಪದವಿ ವ್ಯಾಸಂಗವು ಮುಗಿದ ನಂತರ ರಿಮ್ಸ್ ಸಂಸ್ಥೆಯಲ್ಲಿ ಸೇವೆಯನ್ನು ಮುಂದುವರೆಸುವುದಾಗಿ ತಿಳಿಸಿದ್ದರು. ಹಾಗೂ ಸದರಿ ವೈದ್ಯರ ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಘೋಷಣೆ ಮಾಡಲಾಗಿದ್ದು, ಸಂಸ್ಥೆಯ ಬೈಲಾ ಪುಟ ಸಂಖ್ಯೆ 47 ಪ್ಯಾರ 18ರಲ್ಲಿ ಮೂರು ತಿಂಗಳಿನ ಮೇಲ್ಪಟ್ಟು ಉನ್ನತ ವ್ಯಾಸಂಗಕ್ಕೆ ತೆರಳಲು ಅನುಮತಿ ನೀಡುವ ಬಗ್ಗೆ ಸಂಸ್ಥೆಯ ನಿರ್ದೇಶಕರಿಗೆ ಅವಕಾಶ ಇಲ್ಲದೇ ಇರುವುದರಿಂದ ಸದರಿ ವೈದ್ಯರಿಗೆ ಉನ್ನತ ವ್ಯಾಸಂಗಕ್ಕೆ ಹೋಗಲು ಅನುಮತಿ ನೀಡುವ ಬಗ್ಗೆ ದಿನಾಂಕ 23.06.2014 ಮತ್ತು ದಿನಾಂಕ 27.10.2014ರಂದು ಜರುಗಿದ ಸಂಸ್ಥೆಯ 20ನೇ ಹಾಗೂ 21ನೇ ಆಡಳಿತ ಮಂಡಳಿಯಲ್ಲಿ ವಿಷಯವನ್ನು ಮಂಡಿಸಲಾಗಿತ್ತು.

ದಿನಾಂಕ 23.06.2014ರಂದು ಜರುಗಿದ ರಿಮ್ಸ್ ಸಂಸ್ಥೆಯ 20ನೇ ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿದೆ ಆಡಳಿತ ಮಂಡಳಿಯು ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಮನೋವೈದ್ಯರ ಕೊರತೆಯಿರುವ ಕಾರಣ ಹಾಗೂ ಸದರಿ ವೈದ್ಯರು ತಮ್ಮ ಉನ್ನತ ವ್ಯಾಸಂಗ ಮುಕ್ತಾಯಗೊಂಡ ನಂತರ ಇದೇ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವುದಾಗಿ ತಿಳಿಸಿರುವುದರಿಂದ ಡಾ. ಶರಣ ಬಸವರಾಜ್, ಹಿರಿಯ ಸ್ಥಾನಿಕರು, ಮನೋವೈದ್ಯಶಾಸ್ತ್ರ ವಿಭಾಗ ಹಾಗೂ ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳು, ರಿಮ್ಸ್, ರಾಯಚೂರು ಇವರಿಗೆ ಬೆಂಗಳೂರು ನಗರಕ್ಕೆ ತತ್ಸಮಾನವಾದ ವೇತನ ಸಹಿತ ರಜೆಯನ್ನು 10 ವರ್ಷಗಳ ಕಾಲ ಇದೇ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಷರತ್ತಿನೊಂದಿಗೆ ಹಾಗೂ ಯಾವುದೇ ಬೋಧನಾ ಶುಲ್ಕಗಳನ್ನು ಮರು ಪಾವತಿ ಮಾಡುವುದಿಲ್ಲ ಎಂಬ ಷರತ್ತಿನೊಂದಿಗೆ ಮುಚ್ಚಳಿಕೆ ಪತ್ರವನ್ನು ಪಡೆದು ವ್ಯಾಸಂಗ ರಜೆಯನ್ನು ಮಂಜೂರು ಮಾಡುವಂತೆ ಅನುಮೋದನೆ ನೀಡಲಾಗಿತ್ತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ದಿನಾಂಕ 27.10.2014 ರಂದು ಜರುಗಿದ 21ನೇ ಆಡಳಿಯ ಮಂಡಳಿಯಲ್ಲಿಯೂ ಸಹ ಇದೇ ನಿರ್ಣಯವನ್ನು ಕೈಗೊಂಡು ಉನ್ನತ ವ್ಯಾಸಂಗದ ರಜೆಯನ್ನು ಮಂಜೂರು ಮಾಡುವಂತೆ ಅನುಮೋದನೆ ನೀಡಲಾಗಿತ್ತು.

ರಿಮ್ಸ್ ಕಾರ್ಯಲಯದ ಪತ್ರ ಸಂಖ್ಯೆ. ರಿಮ್ಸ್ / ಆಡಳಿತ / 2015-16 / 80 ದಿನಾಂಕ 11.05.2015 ರಲ್ಲಿ ಆಡಳಿತ ಮಂಡಳಿಯಲ್ಲಿ ಡಾ. ಶರಣಬಸವರಾಜ್ ಇವರ ಉನ್ನತ ವ್ಯಾಸಂಗದ ರಜೆಯನ್ನು ಮಂಜೂರು ಮಾಡುವ ನಿಮಿತ್ತ ಕೈಗೊಂಡ 20 ಹಾಗೂ 21ನೇ ಆಡಳಿತ ಮಂಡಳಿಯ ನಿರ್ಣಯಗಳ ಸಭಾ ನಡವಳಿಗಳೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಕಾರಣ ಡಾ. ಶರಣಬಸವರಾಜ್ ಇವರ ಸಂಪೂರ್ಣ ವಿವರಗಳನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿ, ಉನ್ನತ ವ್ಯಾಸಂಗದ ರಜೆಯನ್ನು ಮಂಜೂರು ಮಾಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

<u>ಸಭೆಯ ತೀರ್ಮಾನ :-</u>

ಡಾ. ಶರಣಬಸವರಾಜ್, ತುರ್ತು ನಿಘಾ ಘಟಕದ ವೈದ್ಯಾಧಿಕಾರಿಗಳು ಇವರಿಗೆ ಉನ್ನತ ವ್ಯಾಸಂಗದ ಅಸಾಧಾರಣ **(Extraordinary)** ರಜೆಯನ್ನು ವೇತನ ರಹಿತವಾಗಿ ಮಂಜೂರು ಮಾಡಲು ಆಡಳಿತ ಮಂಡಳಿಯು ಅನುಮತಿ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ : 12 | ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಖಾಯಂ ಪೂರ್ವ ಸೇವಾವಧಿ ಘೋಷಿಸುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಖಾಲಿಯಿರುವ ವಿವಿಧ ವಿಭಾಗಗಳ ಬೋಧಕ ಸಿಬ್ಬಂದಿಗಳನ್ನು ನೇರ ಸಂದರ್ಶನದ ಮುಖಾಂತರ ನೇಮಕಾತಿ ಮಾಡಿಕೊಳ್ಳಲಾಗಿದ್ದು, 03 ಬೋಧಕ ಸಿಬ್ಬಂದಿಗಳು ಎರಡು ವರ್ಷಗಳ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುತ್ತಾರೆ. ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿಕೊಂಡು ಉತ್ತೀರ್ಣರಾಗಿರುತ್ತಾರೆ. ಸದರಿ ಬೋಧಕ ಸಿಬ್ಬಂದಿಗಳು ಕರ್ನಾಟಕ ನಾಗರೀಕ ಸೇವಾ ನಿಯಾಮವಳಿಯಂತೆ ನಿಗದಿತ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು, ಎರಡು ವರ್ಷದ ಕಾರ್ಯನಿರ್ವಾಹಣಾ ವರದಿ ಹಾಗೂ ಚರಾಸ್ಥಿ ಮತ್ತು ಸ್ಥಿರಾಸ್ತಿಯ ವಿವರವನ್ನು ಈ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ. ಆಕುಕ / 86 / ಎಂಎಂಇ / 2013 ದಿನಾಂಕ 10.04.2013ರನ್ವಯ **Karnataka Civil Services (Probation) Rules, 1977** ರಂತೆ, ಖಾಯಂ ಪೂರ್ವ ಪರೀಕ್ಷಾರ್ಥ ಅವಧಿಯನ್ನು ನೇಮಕಾತಿ ಪ್ರಾಧಿಕಾರವು ಘೋಷಿಸಬೇಕಾಗಿರುವುದರಿಂದ ಕೆಳಕಂಡ ಬೋಧಕ ಸಿಬ್ಬಂದಿಗಳ ಎರಡು ವರ್ಷಗಳ ಖಾಯಂ ಪೂರ್ವ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದ್ದರಿಂದ, ಖಾಯಂಪೂರ್ವ ಸೇವಾವಧಿಯನ್ನು ಘೋಷಣೆ ಮಾಡಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ , ರಾಯಚೂರು

ಖಾಯಂಪೂರ್ವ ಸೇವಾ ಅವಧಿ ತೃಪ್ತಿಕರವಾಗಿ ಘೋಷಣೆ ಮಾಡಲು ಅರ್ಹರಿರುವ ಬೋಧಕ ಸಿಬ್ಬಂದಿಗಳ ವಿವರ

| ಕ್ರ.ಸಂ | ಹೆಸರು | ಜಾತಿ | ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ | ಪದನಾಮ | ವಿಭಾಗ | ಖಾಯಂ ಪೂರ್ವ ಸೇವಾವದಿಗೆ ಅರ್ಹರಾದ ದಿನಾಂಕ | ದಾಖಲಾತಿ | ಬಾಕಿ ವಿಚಾರಣೆ | ಷರಾ |
|---|---|---|---|---|---|---|---|---|---|
| 1 | ಡಾ. ರಮೇಶ್ ಬಾಬು | SC | 19.02.2011 | ಸಹ ಪ್ರಾಧ್ಯಾಪಕರು | ಮನೋರೋಗ ಶಾಸ್ತ್ರ ವಿಭಾಗ (ರಿಮ್ಸ್) | 21.04.2014 | ನಿಗದಿತ ಇಲಾಖಾ ಪರೀಕ್ಷೆ ಹಾಗೂ ಕಾರ್ಯ ನಿರ್ವಾಹಣ ವರದಿ & ಸ್ಥಿರಾಸ್ತಿ – ಚರಾಸ್ತಿಗಳ ವರದಿ | ಇಲ್ಲ | ಖಾಯಂ ಪೂರ್ವ ಸೇವಾವಧಿಗೆ ಅರ್ಹರಾಗಿರುತ್ತಾರೆ |
| 2 | ಡಾ. ಸುರೇಶ್ ಸಗರದ್ | SC | 11.11.2013 | ಸಹಾಯಕ ಪ್ರಾಧ್ಯಾಪಕರು | ಹೃದ್ರೋಗ ವಿಭಾಗ (ಓಪೆಕ್) | 10.11.2015 | ನಿಗದಿತ ಇಲಾಖಾ ಪರೀಕ್ಷೆ ಹಾಗೂ ಕಾರ್ಯ ನಿರ್ವಾಹಣ ವರದಿ & ಸ್ಥಿರಾಸ್ತಿ – ಚರಾಸ್ತಿಗಳ ವರದಿ | ಇಲ್ಲ | ಖಾಯಂ ಪೂರ್ವ ಸೇವಾವಧಿಗೆ ಅರ್ಹರಾಗಿರುತ್ತಾರೆ |
| 3 | ಡಾ. ಅಮರ್‌ದೇವ ಸರದಾರ್ | GM | 06.01.2011 | ಹಿರಿಯ ಸ್ಥಾನಿಕರು | ಅರವಳಿಕೆ ವಿಭಾಗ (ರಿಮ್ಸ್) | 29.10.2015 | ನಿಗದಿತ ಇಲಾಖಾ ಪರೀಕ್ಷೆ ಹಾಗೂ ಕಾರ್ಯ ನಿರ್ವಾಹಣ ವರದಿ & ಸ್ಥಿರಾಸ್ತಿ – ಚರಾಸ್ತಿಗಳ ವರದಿ | ಇಲ್ಲ | ಖಾಯಂ ಪೂರ್ವ ಸೇವಾವಧಿಗೆ ಅರ್ಹರಾಗಿರುತ್ತಾರೆ |

<u>ಸಭೆಯ ತೀರ್ಮಾನ :-</u>

ಸರ್ಕಾರದ ಆದೇಶ ಸಂಖ್ಯೆ. ಆಕುಕ / 86 / ಎಂಎಂಇ / 2013 ದಿನಾಂಕ 10.04.2013ರನ್ವಯ ಮತ್ತು **Karnataka Civil Services (Probation) Rules, 1977** ರನ್ವಯ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ರಮೇಶ್ ಬಾಬು, ಸಹ ಪ್ರಾಧ್ಯಾಪಕರು ಮಾನಸಿಕ ರೋಗ ವಿಭಾಗ, ಡಾ. ಸುರೇಶ್ ಸಗರದ್, ಸಹಾಯಕ ಪ್ರಾಧ್ಯಾಪಕರು ಹೃದ್ರೋಗ ವಿಭಾಗ ಹಾಗೂ ಡಾ. ಅಮರ್ ದೇವ್ ಸರ್ದಾರ್, ಹಿರಿಯ ಸ್ಥಾನಿಕರು, ಅರವಳಿಕೆ ವಿಭಾಗ ಇವರ ಖಾಯಂ ಪೂರ್ವ ಸೇವಾವಧಿಯನ್ನು ನಿಯಮಾನುಸಾರ ಘೋಷಣೆ ಮಾಡಿರುವ ಬಗ್ಗೆ ಆಡಳಿತ ಮಂಡಳಿಯು ಪರಿಶೀಲಿಸಿ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 13 | ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತುರ್ತು ನಿಘಾ ಘಟಕದ ವೈದ್ಯಾಧಿಕಾರಿಗಳು ಗೈರು ಹಾಜರಿಯಾಗಿರುವ ಬಗ್ಗೆ. |

ದಿನಾಂಕ 28.07.2010 ರಂದು ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 4ನೇ ಹಣಕಾಸು ಸಮಿತಿ ಸಭೆಯ ಅನುಮೋದನೆ ಪಡೆದು 10 ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳನ್ನು ನಿಯಮಾನುಸಾರ ಖಾಯಂ ನೇಮಕಾತಿ ಮಾಡಿಕೊಳ್ಳಲಾಗಿತ್ತು. ಅದರ ವಿವರ ಈ ಕೆಳಗಿನಂತಿದೆ.

| S.No. | Name | Designation | Category | DOJ |
|---|---|---|---|---|
| 1 | Dr. Sharanbasavaraj | CMO | IIA | 15.10.2010 |
| 2 | Dr. Praveenkumar | CMO | GM | 18.10.2010 |
| 3 | Dr. Amarjeet Patil | CMO | IIIB | 18.10.2010 |

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| | | | | |
|---|---|---|---|---|
| 4 | Dr. Vasudev Jahagirdar | CMO | GM | 18.10.2010 |
| 5 | Dr. Ashok | CMO | SC | 18.10.2010 |
| 6 | Dr. N. Prasanna | CMO | GM | 08.11.2010 |
| 7 | Dr. Waim Miya | CMO | IIB | 10.11.2010 |
| 8 | Dr. Umesh | CMO | GM | 26.08.2011 |
| 9 | Dr. Pratibha .H | CMO | GM | 05.09.2011 |

ಆದರೆ ಕೆಲವು ತುರ್ತು ನಿಘಾ ಘಟಕದ ವೈದ್ಯಾಧಿಕಾರಿಗಳು, ಸಂಸ್ಥೆಯ ಅನುಮತಿ ಪಡೆಯದೇ ಗೈರು ಹಾಜರಿಯಾಗಿರುತ್ತಾರೆ. ಸದರಿ ವೈದ್ಯರುಗಳ ವಿವರ ಈ ಕೆಳಗಿನಂತಿದೆ.

1) ಡಾ. ಅಶೋಕ್ :-

ಡಾ. ಅಶೋಕ ಇವರು ರಿಮ್ಸ್ ಸಂಸ್ಥೆಯಲ್ಲಿ ದಿನಾಂಕ 18.10.2010ರಂದು ತುರ್ತು ನಿಘಾ ಘಟಕದ ವೈದ್ಯಾಧಿಕಾರಿ ಹುದ್ದಯ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಸದರಿ ವೈದ್ಯರು ದಿನಾಂಕ 20.07.2015–20.07.2016ರ ವರೆಗೆ ಒಂದು ವರ್ಷದ ಅವಧಿಗೆ **Diploma in Emergency Medicine Course in Apollo Hospital, Bangalore** ಇಲ್ಲಿಗೆ ಆಯ್ಕೆಯಾಗಿದ್ದು, ಉನ್ನತ ವ್ಯಾಸಗಕ್ಕೆ ತೆರಳಲು ಸ್ಟಡಿ ಲೀವ್ ನೀಡುವಂತೆ ಕೋರಿ ದಿನಾಂಕ : 18.07.2015ರಂದು ಈ ಕಾರ್ಯಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಆದರೆ ಸದರಿ ವೈದ್ಯರು ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆಯುವ ಮುಂಚೆ ಸಂಸ್ಥೆಯಿಂದ ಯಾವುದೇ ಅನುಮತಿ ಪಡೆದಿರುವುದಿಲ್ಲ. ಈ ಹಿನ್ನಲೆಯಲ್ಲಿ ಸದರಿ ವೈದ್ಯರಿಗೆ ಕರ್ತವ್ಯಕ್ಕೆ ಹಾಜರಾಗುವಂತೆ ದಿನಾಂಕ : 01.09.2015 ಮತ್ತು 15.09.2015 ರಂದು 02 ಕಾರಣ ಕೇಳುವ ನೋಟೀಸನ್ನು ಜಾರಿಮಾಡಲಾಗಿರುತ್ತದೆ. ಆದರೂ ಸದರಿ ವೈದ್ಯರು ಸಂಸ್ಥೆಯ ನೋಟಿಸ್ ಪತ್ರಗಳಿಗೆ ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲಿ ಮತ್ತು ಕರ್ತವ್ಯಕ್ಕೂ ಸಹ ಹಾಜರಾಗಿರುವುದಿಲ್ಲ.

2) ಡಾ. ಪ್ರವೀಣ್ ಕುಮಾರ್ :-

ಡಾ. ಪ್ರವೀಣ ಕುಮಾರ ಇವರು ರಿಮ್ಸ್ ಸಂಸ್ಥೆಯಲ್ಲಿ ದಿನಾಂಕ 18.10.2010 ರಂದು ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳ ಹುದ್ದಯ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ದಿನಾಂಕ : 01.06.2014 ರಿಂದ ಸತತವಾಗಿ ಅನಧಿಕೃತವಾಗಿ ಗೈರು ಹಾಜರಾಗಿರುತ್ತಾರೆ. ಸದರಿ ವೈದ್ಯರಿಗೆ ಈ ಕಾರ್ಯಲಯದ ವತಿಯಿಂದ ದಿನಾಂಕ : 05.09.2014, 16.10.2014 ಹಾಗೂ 08.07.2015 ರಂದು 03 ನೋಟೀಸ್‌ಗಳನ್ನು ಜಾರಿಮಾಡಲಾಗಿರುತ್ತದೆ. ಸದರಿ ವೈದ್ಯರು ದಿನಾಂಕ : 22.10.2014 ರಂದು ಕಾರಣ ಕೇಳುವ ನೋಟೀಸ್‌ಗೆ ಸಮಜಾಯಿಷಿಯನ್ನು ನೀಡಿದ್ದು, ಸಮಜಾಯಿಷಿಯಲ್ಲಿ ವಿಧಿವೈದ್ಯಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಸೀಟನ್ನು ಪಡೆದಿದ್ದು, 03 ವರ್ಷಗಳ ಸ್ಟಡಿ ಲೀವ್ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ. ಆದರೆ ಸದರಿ ವೈದ್ಯರು ಉನ್ನತ ವ್ಯಾಸಂಗ ಕೈಗೊಳ್ಳುವ ಮುಂಚೆ ಸಂಸ್ಥೆಯಿಂದ ಯಾವುದೇ ಪೂರ್ವಾನುಮತಿ ಪಡೆದಿರುವುದಿಲ್ಲ.

3) ಡಾ. ಎನ್. ಪ್ರಸನ್ನ :-

ಡಾ. ಎನ್. ಪ್ರಸನ್ನ ಇವರು ದಿನಾಂಕ 08.11.2010 ರಂದು ತುರ್ತು ನಿಘಾ ಘಟಕದ ವೈದ್ಯಾಧಿಕಾರಿ ಹುದ್ದೆಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಸದರಿ ವೈದ್ಯರು ದಿನಾಂಕ 12.07.2014 ರ ತಮ್ಮ ಪತ್ರದಲ್ಲಿ ರೋಗನಿರ್ಧಾರಕ ಶಾಸ್ತ್ರ ವಿಭಾಗದ ಪಿಜಿ ಸೀಟ್ ದೊರೆತಿದ್ದು, ಈ ವ್ಯಾಸಂಗವನ್ನು ಮಾಡಲು 03 ವರ್ಷಗಳ ಉನ್ನತ ವ್ಯಾಸಂಗ ರಜೆಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಸದರಿ ವೈದ್ಯರು ಸ್ನಾತಕೋತ್ತರ ಪದವಿಯ ಪ್ರವೇಶ ಪಡೆಯುವುದಕ್ಕಿಂತ ಪೂರ್ವದಲ್ಲಿ ಸಂಸ್ಥೆಯಿಂದ ಯಾವುದೇ ಅನುಮತಿ ಪಡೆದಿರುವುದಿಲ್ಲ. ಈ ಹಿನ್ನಲೆಯಲ್ಲಿ ಡಾ. ಪ್ರಸನ್ನ ಇವರಿಗೆ ಕರ್ತವ್ಯಕ್ಕೆ ಹಾಜರಾಗುವಂತೆ ನೋಟೀಸನ್ನು ದಿನಾಂಕ : 05.09.2014, 06.10.2014 ಹಾಗೂ 08.07.2015 ರಂದು 03 ನೋಟೀಸಗಳನ್ನು ಜಾರಿ ಮಾಡಲಾಗಿರುತ್ತದೆ. ಆದರೆ ಡಾ. ಪ್ರಸನ್ನ ಇವರು ಕರ್ತವ್ಯಕ್ಕೆ ಹಾಜರಾಗದೇ ಉನ್ನತ ವ್ಯಾಸಂಗ ರಜೆಯನ್ನು ಮಂಜೂರು ಮಾಡುವಂತೆ ನೋಟೀಸ್‌ಗೆ ಸಮಜಾಯಿಷಿಯನ್ನು ನೀಡಿರುತ್ತಾರೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

4) ಡಾ. ಅಮರ್‌ಜಿತ ಪಾಟೀಲ್ :-

ಡಾ. ಅಮರ್‌ಜಿತ ಪಾಟೀಲ್ ಇವರು ತುರ್ತು ನಿಘಾ ಘಟಕದ ವೈದ್ಯಾಧಿಕಾರಿ ಹುದ್ದೆಗೆ ದಿನಾಂಕ 18.10.2010 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಸದರಿಯವರು ದಿನಾಂಕ : 01.08.2014ರ ಮನವಿ ಪತ್ರದಲ್ಲಿ ವೈದ್ಯಶಾಸ್ತ್ರ ವಿಭಾಗದಲ್ಲಿ ತಮಗೆ ಸ್ನಾತಕೋತ್ತರ ಪದವಿ ಸೀಟು ದೊರೆತಿದ್ದು, ಸ್ನಾತಕೋತ್ತರ ಪದವಿಯ ಸಂಬಂಧ ಉನ್ನತ ವ್ಯಾಸಂಗಕ್ಕೆ ತೆರಳುತ್ತಿದ್ದು, ಈ ಹಿನ್ನಲೆಯಲ್ಲಿ 03 ವರ್ಷಗಳ ವೇತನ ರಹಿತ ವ್ಯಾಸಂಗ ರಜೆಯನ್ನು ಮಂಜೂರು ಮಾಡುವಂತೆ ಕೋರಿ ಈ ಕಾರ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಆದರೆ ಸದರಿ ವೈದ್ಯರು ಸ್ನಾತಕೋತ್ತರ ಪದವಿಯ ಪ್ರವೇಶ ಪಡೆಯುವುದಕ್ಕಿಂತ ಪೂರ್ವದಲ್ಲಿ ಸಂಸ್ಥೆಯಿಂದ ಯಾವುದೇ ಅನುಮತಿ ಪಡೆದಿರುವುದಿಲ್ಲ. ಈ ಹಿನ್ನಲೆಯಲ್ಲಿ ಡಾ. ಅಮರಜೀತ್ ಪಾಟೀಲ್ ಇವರಿಗೆ ಕರ್ತವ್ಯಕ್ಕೆ ಹಾಜರಾಗುವಂತೆ ದಿನಾಂಕ : 05.09.2014, ದಿನಾಂಕ 06.10.2014 ಹಾಗೂ ದಿನಾಂಕ 08.07.2015 ರಂದು 03 ನೋಟೀಸಗಳನ್ನು ಜಾರಿ ಮಾಡಲಾಗಿರುತ್ತದೆ. ಆದರೆ ಡಾ. ಅಮರಜೀಥ್ ಪಾಟೀಲ್ ಇವರು ಈವರೆಗೆ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ ಹಾಗೂ ಸಂಸ್ಥೆಯಿಂದ ನೀಡಲಾದ ನೋಟೀಸ್‌ಗೆ ಯಾವುದೇ ಸಮಜಾಯಿಷಿಯನ್ನು ಉತ್ತರವನ್ನು ಸಹ ನೀಡಿರುವುದಿಲ್ಲ.

ಈ ಮೇಲ್ಕಂಡ ನಾಲ್ಕು ತುರ್ತು ನಿಘಾ ಘಟಕದ ವೈದ್ಯಾಧಿಕಾರಿಗಳು ಉನ್ನತ ವ್ಯಾಸಂಗದ ನಿಮಿತ್ತ ಸಂಸ್ಥೆಯಿಂದ ಯಾವುದೇ ಅನುಮತಿ ಪಡೆಯದೇ ರಜೆಯ ಮೇಲೆ ತೆರಳಿದ್ದು, ಈ ಸಂಸ್ಥೆಯಿಂದ ನೀಡಲಾದ ನೋಟಿಸ್‌ಗಳಿಗೆ ಸಮಂಜಸ ಉತ್ತರವನ್ನು ಸಹ ನೀಡದೇ ಇರುವುದರಿಂದ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಆಡಳಿತ ಮಂಡಳಿಯ ಮಾರ್ಗದರ್ಶನ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಡಾ. ಅಶೋಕ್, ಡಾ. ಪ್ರವೀಣ್ ಕುಮಾರ್, ಡಾ. ಎನ್. ಪ್ರಸನ್ನ ಹಾಗೂ ಡಾ. ಅಮರ್‌ಜಿತ್ ಪಾಟೀಲ್, ತುರ್ತು ನಿಘಾ ಘಟಕದ ವೈದ್ಯಾಧಿಕಾರಿಗಳು ಉನ್ನತ ವ್ಯಾಸಂಗದ ನಿಮಿತ್ತ ಸಂಸ್ಥೆಯಿಂದ ಯಾವುದೇ ಅನುಮತಿ ಪಡೆಯದೇ ರಜೆಯ ಮೇಲೆ ತೆರಳಿರುವುದರಿಂದ ಅಂತಿಮ ನೋಟಿಸ್‌ನ್ನು ನೀಡಿ, ಕರ್ತವ್ಯದಿಂದ ವಜಾಗೊಳಿಸಲು ಆಡಳಿತ ಮಂಡಳಿಯು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ನಿರ್ದೇಶನ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 14 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಓರ್ವ ಕಾನೂನು ಸಲಹೆಗಾರರನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ. |

ದಿನಾಂಕ 08.09.2008 ರಂದು ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 8ನೇ ಆಡಳಿತ ಮಂಡಳಿಯ ನಿರ್ದೇಶನದಂತೆ ಸಂಸ್ಥೆಯ ಕಾನೂನು ವ್ಯಾಜ್ಯಗಳಿಗೆ ಸಂಬಂಧಿಸಿದ ವಿಷಯಗಳನ್ನು ವಿಲೇವಾರಿ ಮಾಡಲು ಈ ಕಾರ್ಯಾಲಯದ ಪತ್ರ ಸಂಖ್ಯೆ. ರಿಮ್ಸ್ / ಆಡಳಿತ / 126 / 2008-09 ದಿನಾಂಕ 23.09.2008 ರನ್ವಯ ಶ್ರೀ ಸತೀಶ್ ಇವರನ್ನು ಸಂಸ್ಥೆಯ ಕಾನೂನು ಸಲಹೆಗಾರರನ್ನಾಗಿ ಪ್ರತಿ ತಿಂಗಳು ರೂ. 7,500/- ಗಳ **Retainer** ಶುಲ್ಕವನ್ನು ನಿಗದಿಪಡಿಸಿ ನೇಮಕಾತಿ ಮಾಡಿಕೊಳ್ಳಲಾಗಿತ್ತು.

ಶ್ರೀ ಸತೀಶ್ ಇವರು ಸಂಸ್ಥೆಯ ಕಾನೂನು ಸಲಹೆಗಾರರಾಗಿ ನೇಮಕಗೊಂಡ ದಿನಾಂಕದಿಂದ ಇಲ್ಲಿಯವರೆಗೆ ಸಂಸ್ಥೆಗೆ ಸಂಬಂಧಿಸಿದ ಎಲ್ಲಾ ರೀತಿಯ ಕಾನೂನು ವ್ಯಾಜ್ಯಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿರುತ್ತಾರೆ. ಆದರೆ ದಿನಾಂಕ 29.12.2015 ರಂದು ಅನಾರೋಗ್ಯದ ಹಿನ್ನಲೆಯಲ್ಲಿ ಶ್ರೀ ಸತೀಶ್ ಇವರು ಅಕಾಲಿಕ ಮರಣವನ್ನು ಹೊಂದಿದ್ದು, ಇವರ ಮರಣದ ನಂತರ ಸಂಸ್ಥೆಗೆ ಸಂಬಂಧಿಸಿದ ವ್ಯಾಜ್ಯಗಳು ನ್ಯಾಯಲಯದಲ್ಲಿ ಇತ್ಯರ್ಥವಾಗದೇ ಬಾಕಿ ಉಳಿದಿರುತ್ತವೆ. ನ್ಯಾಯಲಯದಲ್ಲಿ ಬಾಕಿ ಉಳಿದಿರುವ ಸಂಸ್ಥೆಗೆ ಸಂಬಂಧಿಸಿದ ಕಾನೂನು ವ್ಯಾಜ್ಯಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವ ಸಂಬಂಧ ಓರ್ವ ಕಾನೂನು ಸಲಹೆಗಾರರನ್ನು ನೇಮಕಾತಿ ಮಾಡಿಕೊಳ್ಳುವುದು ಅತಿಅವಶ್ಯಕವಾಗಿರುತ್ತದೆ. ತಪ್ಪಿದಲ್ಲಿ ಸಂಸ್ಥೆಗೆ ಸಂಬಂಧಿಸಿದ ಕಾನೂನು ವ್ಯಾಜ್ಯಗಳು ಪ್ರತಿವಾದಿಗಳ ಪರವಾಗಿ ಆಗುವ ಸಾಧ್ಯತೆಯಿರುತ್ತದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್ ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾನೂನು ಸಲಹೆಗಾರರನ್ನಾಗಿ ನೇಮಕಾತಿ ಮಾಡಿಕೊಳ್ಳುವಂತೆ ಹಲವು ಆಕಾಂಕ್ಷಿಗಳು ಈ ಕಾರ್ಯಾಲಯಕ್ಕೆ ತಮ್ಮ ಸ್ವ – ಚರಿತ್ರೆಯನ್ನು ಸಲ್ಲಿಸಿರುತ್ತಾರೆ. ಅದರ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಹೆಸರು | ಪದನಾಮ | ಮನವಿ ಸಲ್ಲಿಸಿದ ದಿನಾಂಕ | ಷರಾ |
|---|---|---|---|---|
| 1 | ಶ್ರೀ ಶಿವಕುಮಾರ್ | ವಕೀಲರು | 23.03.2016 | ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳಲ್ಲಿ 29 ವರ್ಷಗಳ ಸೇವಾನುಭವವನ್ನು ಹೊಂದಿರುತ್ತಾರೆ |
| 2 | ಶ್ರೀ ಶಿವರಾಜ್ ಪಾಟೀಲ್,<br>#1–12–132/87,<br>ಪಿ.ಸಿ.ಬಿ. ಕಾಲೋನಿ, ರಾಯಚೂರು | ವಕೀಲರು | 25.01.2016 | ಸಿವಿಲ್, ಕ್ರಿಮಿನಲ್, ಕಾರ್ಮಿಕ ನ್ಯಾಯಲದ ಪ್ರಕರಣಗಳು ಮತ್ತು ಕಂದಾಯ ಇಲಾಖೆಗೆ ಸಂಬಂಧಿಸಿದ ವಿಷಯಗಳಲ್ಲಿ ನಿಪುಣರಾಗಿರುತ್ತಾರೆ. |
| 3 | ಶ್ರೀ ಬ್ರಹ್ಮ ಗಣೇಶ್,<br>ಮನೆ ನಂ. 6–2–68/69,<br>ಅಮರ್‌ಖೇಡ್ ಲೇಔಟ್, ರಾಯಚೂರು | ವಕೀಲರು | 23.03.2016 | ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳಲ್ಲಿ ಸೇವಾನುಭವವನ್ನು ಹೊಂದಿರುತ್ತಾರೆ |
| 4 | ಶ್ರೀ ಬಿ.ಎಸ್. ಪಾಟೀಲ್,<br>ಮನೆ ನಂ. 1–12–45/1,<br>ಡ್ಯಾಡಿ ಕಾಲೋನಿ, ರಾಯಚೂರು. | ವಕೀಲರು | 23.03.2016 | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ದಲ್ಲಿ 2005 ರಿಂದ ಕಾನೂನು ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. |
| 5 | ಶ್ರೀ ಶಿವಶಂಕರ್,<br>#1–4–88/11, ಶ್ರೀ ನಂದೀಶ್ವರ ನಿಲಯ,<br>ರಾಮಲಿಂಗೇಶ್ವರ ಲೇ ಔಟ್, ಮದರ್ ಟ್ರಸ್ಟ್ ಸ್ಕೂಲ್ ಹತ್ತಿರ, ರಾಯಚೂರು | ವಕೀಲರು | 23.03.2016 | ಸಿವಿಲ್, ಕ್ರಿಮಿನಲ್ ಮತ್ತು ಹಣಕಾಸಿನ ಪ್ರಕರಣಗಳಲ್ಲಿ 17 ವರ್ಷಗಳ ಸೇವಾನುಭವವನ್ನು ಹೊಂದಿರುತ್ತಾರೆ |
| 6 | ಶ್ರೀ ಮಲ್ಲನಗೌಡ,<br>ಮನೆ ನಂ. 1–11–37/36,<br>ಹೌಸಿಂಗ್ ಸೊಸೈಟಿ,<br>ಲಿಂಗಸೂಗೂರು ರಸ್ತೆ, ರಾಯಚೂರು | ವಕೀಲರು | 22.10.2013 & 23.03.2016 | ಸಿವಿಲ್, ಕ್ರಿಮಿನಲ್ ಮತ್ತು ಭೂ ವ್ಯಾಜ್ಯಗಳ ಪ್ರಕರಣಗಳಲ್ಲಿ 34 ವರ್ಷಗಳ ಸೇವಾನುಭವವನ್ನು ಹೊಂದಿರುತ್ತಾರೆ |
| 7 | ಶ್ರೀ ಶ್ರೀನಿವಾಸ್. ಎ,<br>ಈಶ್ವರ ನಗರ, ರಾಯಚೂರು | ವಕೀಲರು | 19.02.2016 | ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳಲ್ಲಿ 16 ವರ್ಷಗಳ ಸೇವಾನುಭವವನ್ನು ಹೊಂದಿರುತ್ತಾರೆ. |
| 8 | ಶ್ರೀ. ಎಸ್. ಚಂದ್ರಶೇಖರಯ್ಯ,<br>#10–3–15, ಶಿವಕೃಪ, ಮಕ್ತಲ್‌ಪೇಟ್,<br>ರಾಯಚೂರು | ವಕೀಲರು | 24.02.2016 | ಸೇವಾ ವಿಷಯಗಳು, ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳಲ್ಲಿ 31 ವರ್ಷಗಳ ಸೇವಾನುಭವವನ್ನು ಹೊಂದಿರುತ್ತಾರೆ. |
| 9 | ಶ್ರೀ ಶ್ರೀಧರ್,<br>ಶಾಪ್ ನಂ. 1–12–61/7,<br>ಗಣೇಶ್ ಕಾಲೋನಿ, ಡ್ಯಾಡಿ ಕಾಲೋನಿ ಪಕ್ಕ,<br>ರಾಯಚೂರು. | ವಕೀಲರು | 13.04.2016 | ಸಿವಿಲ್, ಕ್ರಿಮಿನಲ್, ಕಾರ್ಮಿಕ ನ್ಯಾಯಲಯದ ಪ್ರಕರಣಗಳು ಮತ್ತು ಗ್ರಾಹಕರಿಗೆ ಸಂಬಂಧಿಸಿದ ವಿಷಯಗಳಲ್ಲಿ ನಿಪುಣರಾಗಿರುತ್ತಾರೆ. |
| 10 | ಶ್ರೀ ಶಶಿಧರ್ ಬಿ. ಹಿರೇಮಠ,<br>ಮನೆ ನಂ. 8–11–55, ಸಂಗಮ ರೇವಣ ಕೃಪ,<br>ನೀಲಕಂಠೇಶ್ವರ ನಗರ, ರಾಯಚೂರು | ವಕೀಲರು | 15.04.2016 | ಸಿವಿಲ್ ಮತ್ತು ಕ್ರಿಮಿನಲ್‌ಗೆ ಸಂಬಂಧಿಸಿದ ವಿಷಯಗಳಲ್ಲಿ ನಿಪುಣರಾಗಿರುತ್ತಾರೆ. |

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಕಾರಣ ಮೇಲ್ಕಂಡ ಎಲ್ಲಾ ಅಂಶಗಳನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿ, ಸಂಸ್ಥೆಗೆ ಸಂಬಂಧಿಸಿದ ಕಾನೂನು ವ್ಯಾಜ್ಯಗಳನ್ನು ನ್ಯಾಯಲಯದಲ್ಲಿ ಇತ್ಯರ್ಥಗೊಳಿಸಲು ಓರ್ವ ಕಾನೂನು ಸಲಹೆಗಾರರನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಆಡಳಿತ ಮಂಡಳಿಯ ಮಾರ್ಗದರ್ಶನ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅವಶ್ಯವಿರುವ ಓರ್ವ ಕಾನೂನು ಸಲಹೆಗಾರರ ಸೇವೆಯನ್ನು ಪಡೆಯಲು, ವಕೀಲರುಗಳ ಒಂದು ಸಮಿತಿಯನ್ನು ರಚಿಸಿಕೊಂಡು (Constitute a panel of Legal Advisor), ಸಮಿತಿಯಲ್ಲಿರುವ ಎಲ್ಲಾ ವಕೀಲರುಗಳಿಗೆ ಅನುಕ್ರಮವಾಗಿ (Respectively) ಪ್ರಕರಣಗಳನ್ನು ನೀಡುವಂತೆ ನಿರ್ದೇಶಕರು, ರಿಮ್ಸ್ ರಾಯಚೂರು ಇವರಿಗೆ ಸೂಚಿಸಲಾಯಿತು. ಹಾಗೂ ಪ್ರಕರಣಗಳಿಗೆ ತಕ್ಕಂತೆ ಕಾನೂನು ಸಲಹೆಗಾರರ ಶುಲ್ಕವನ್ನು ಪಾವತಿಸಲು ಅನುಮತಿ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 15 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಓರ್ವ Estate Officer ನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ದಿನಾಂಕ 16.08.2007 ರಿಂದ ಪ್ರಾರಂಭಗೊಂಡಿದ್ದು, ಪ್ರಸ್ತುತ 600 ವೈದ್ಯ ವಿದ್ಯಾರ್ಥಿಗಳು, 20 ಸಾತಕೋತ್ತರ ವಿದ್ಯಾರ್ಥಿಗಳು, 200 ಅರೆ ವೈದ್ಯಕೀಯ ವಿದ್ಯಾರ್ಥಿಗಳು, 150 ಕ್ಕೂ ಹೆಚ್ಚು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ರಿಮ್ಸ್ ಆವರಣದಲ್ಲಿ ವಾಸವಾಗಿರುತ್ತಾರೆ. ರಿಮ್ಸ್ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಪ್ರತ್ಯೇಕವಾಗಿ ವಸತಿ ನಿಲಯಗಳ ಕಟ್ಟಡಗಳನ್ನು ನಿರ್ಮಿಸಲಾಗಿದೆ.

ರಿಮ್ಸ್ ಆವರಣದಲ್ಲಿ ನಿರ್ಮಾಣ ಮಾಡಲಾಗಿರುವ ಎಲ್ಲಾ ಕಟ್ಟಡಗಳು ಬಹುಮಹಡಿ ಕಟ್ಟಡಗಳಾಗಿರುವುದರಿಂದ ಪ್ರತಿ ನಿತ್ಯ ಪ್ಲಂಬಿಂಗ್, ವಿದ್ಯುತ್ ಹಾಗೂ ಇನ್ನಿತರೆ ಸಮಸ್ಯೆಗಳು ಉದ್ಭವಿಸುತ್ತಲೇ ಇರುತ್ತವೆ. ಪ್ರಸ್ತುತ ಈ ಸಂಸ್ಥೆಯಲ್ಲಿ ಲಭ್ಯವಿರುವ ಪ್ಲಂಬರ್ ಹಾಗೂ ವಿದ್ಯುತ್‌ಕರ್ಮಿಗಳಿಂದ ಇಂತಹ ಸಮಸ್ಯೆಗಳನ್ನು ಅದಷ್ಟು ಮಟ್ಟಿಗೆ ನಿವಾರಿಸಲಾಗುತ್ತಿದ್ದು, ವಿದ್ಯುತ್ ಕರ್ಮಿಗಳು, ಪ್ಲಂಬರ್ಸ್ ಹಾಗೂ ನಿರ್ವಹಣಾ ವಿಭಾಗದ ಅಡಿಯಲ್ಲಿ ಬರುವ ಸಿಬ್ಬಂದಿಗಳ ಕಾರ್ಯನಿರ್ವಹಣೆಯನ್ನು ನೋಡಿಕೊಳ್ಳಲು ಮತ್ತು ತುರ್ತಾಗಿ ಸಮಸ್ಯೆಗಳನ್ನು ದುರಸ್ಥಿ ಮಾಡಿಸಲು ಓರ್ವ Estate Officer ನ್ನು ನೇಮಕಾತಿಯು ಅತಿ ಅವಶ್ಯಕವಾಗಿರುತ್ತದೆ. ಈ ಸಂಬಂಧವಾಗಿ ದಿನಾಂಕ 11.09.2015 ರಂದು ಜರುಗಿದ ರಿಮ್ಸ್ ಸಂಸ್ಥೆಯ 23ನೇ ಆಡಳಿತ ಮಂಡಳಿ ಸಭೆಯಲ್ಲಿ ನಿರ್ವಹಣಾ ವಿಭಾಗಕ್ಕೆ ಅವಶ್ಯವಿರುವ ವಿವಿಧ ಹುದ್ದೆಗಳನ್ನು ಸೃಜಿಸಿಕೊಳ್ಳಲು ಅನುಮತಿಯನ್ನು ನೀಡಲಾಗಿರುತ್ತದೆ. ಆದರೆ Estate Officer ನ್ನು ನೇಮಕಾತಿಯನ್ನು ಮಾಡಿಕೊಳ್ಳುವುದು ಅತಿ ಅವಶ್ಯಕವಾಗಿರುತ್ತದೆ.

ಕಾರಣ ಈಗಾಗಲೇ ಲೋಕೋಪಯೋಗಿ ಇಲಾಖೆಯಲ್ಲಿ ಸುಮಾರು 10 ವರ್ಷಗಳ ಕಾಲ ಸತತವಾಗಿ ಸೇವೆ ಸಲ್ಲಿಸಿದ ಹಾಗೂ ವಿದ್ಯುತ್ ಮತ್ತು ಪ್ಲಂಬಿಂಗ್ ಕಾರ್ಯಗಳಲ್ಲಿ ಹೆಚ್ಚಿನ ಸೇವಾನುಭವವನ್ನು ಹೊಂದಿ ನಿವೃತ್ತರಾದ ಓರ್ವ ಸಹಾಯಕ ಅಭಿಯಂತರರನ್ನು Estate Officer ನ್ನಾಗಿ ಸಂಚಿತ ವೇತನದಲ್ಲಿ ತಾತ್ಕಲಿಕವಾಗಿ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅವಶ್ಯವಿರುವ ಓರ್ವ **Estate Officer** ನ್ನು ಗುತ್ತಿಗೆ ಆಧಾರದ ಮೇಲೆ ರೂ. 15,000/-- ಗಳ ವೇತನವನ್ನು ನಿಗದಿಪಡಿಸಿ ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

**Estate Officer** ನ್ನು ನೇಮಕಾತಿ ಮಾಡಿಕೊಳ್ಳುವ ಪೂರ್ವದಲ್ಲಿ ಸದರಿಯವರ ಸೇವೆ, ಪ್ಲಬಿಂಗ್ ಹಾಗೂ ವಿದ್ಯುತ್‌ನ ಕೆಲಸ ಕಾರ್ಯಗಳಲ್ಲಿ ಅಪಾರ ಅನುಭವದ ಹೊಂದಿರುವಂತಹ ಅಭ್ಯರ್ಥಿಯನ್ನು ನೇಮಕಾತಿ ಮಾಡಿಕೊಳ್ಳಲು ನಿರ್ದೇಶನ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. : 16 | ಡಾ. ವಿ.ಬಿ. ಮಾಲಿ ಪಾಟೀಲ್ ಹಾಗೂ ಡಾ. ಪುಷ್ಪಾಂಜಲಿ ಮಾಲಿ ಪಾಟೀಲ್ ಇವರನ್ನು ರಿಮ್ಸ್ ಸಂಸ್ಥೆಯಿಂದ ಕಿಮ್ಸ್, ಹುಬ್ಬಳ್ಳಿಗೆ ವರ್ಗಾಯಿಸುವ ಕುರಿತು. |

ಸರ್ಕಾರದ ಆದೇಶ ಸಂ. ಆಕುಕ 123 ಕೆವಿಎಂ 2009 ಬೆಂಗಳೂರು, ದಿನಾಂಕ : 29.12.2009 ಮತ್ತು ಸರ್ಕಾರದ ಆದೇಶ ಸಂ. ಆಕುಕ 124 ಕೆವಿಎಂ 2009 ಬೆಂಗಳೂರು, ದಿನಾಂಕ : 29.12.2009 ರನ್ವಯ ಡಾ. ಪುಷ್ಪಾ ಮಾಲಿಪಾಟೀಲ್, ಸ್ತ್ರೀ ಮತ್ತು ಪ್ರಸೂತಿ ವಿಭಾಗ ಮತ್ತು ಡಾ. ವಿ.ಬಿ.ಮಾಲಿಪಾಟೀಲ್, ಶಸ್ತ್ರ ಚಿಕಿತ್ಸಾ ವಿಭಾಗ ಇವರುಗಳನ್ನು ಹುಬ್ಬಳ್ಳಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಈ ಸಂಸ್ಥೆಯಲ್ಲಿ ದಿನಾಂಕ : 06.01.2010 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

ಆದರೆ ಡಾ. ವಿ.ಬಿ. ಮಾಲಿ ಪಾಟೀಲ್ ಹಾಗೂ ಡಾ. ಪುಷ್ಪಾಂಜಲಿ ಮಾಲಿ ಪಾಟೀಲ್ ಇವರುಗಳು ತಾವು ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಲ್ಲಿ ಈಗಾಗಲೇ ಐದು ವರ್ಷಗಳ ಸೇವಾನುಭವವನ್ನು ಹೊಂದಿರುವುದರಿಂದ, ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುವಂತೆ ಕೋರಿರುತ್ತಾರೆ. ಆದರೆ ಸದರಿ ವೈದ್ಯರುಗಳು ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವುದರಿಂದ, ಸದರಿಯವರ ಪದೋನ್ನತಿಯನ್ನು ಮಾತೃ ಸಂಸ್ಥೆಯಿಂದಲೇ ನೀಡಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಸದರಿ ವೈದ್ಯರನ್ನು ಮಾತೃ ಇಲಾಖೆಗೆ ಹಿಂದುರುಗಿಸುವ ಬಗ್ಗೆ ದಿನಾಂಕ 11.09.2015 ರಂದು ಜರುಗಿದ ರಿಮ್ಸ್ ಸಂಸ್ಥೆಯ 23ನೇ ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ ಆಡಳಿತ ಮಂಡಳಿಯು ಸದರಿ ವೈದ್ಯರುಗಳ ಪದೋನ್ನತಿ ನೀಡುವ ಸಂಬಂಧ ಮುಂಬರುವ ಇಲಾಖಾ ಪದೋನ್ನತಿ ಸಭೆಯಲ್ಲಿ ಮಂಡಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿರುತ್ತದೆ.

ಸರ್ಕಾರದ ಆದೇಶ ಸಂ. ಆಕುಕ 66 ಎಂಎಂಇ 2012 ದಿನಾಂಕ : 25.08.2012 ರನ್ವಯ ಡಾ. ವಿ.ಬಿ. ಮಾಲಿ ಪಾಟೀಲ್ ಹಾಗೂ ಡಾ. ಪುಷ್ಪಾಂಜಲಿ ಮಾಲಿ ಪಾಟೀಲ್ ಇವರುಗಳು ಮೂಲತಃ ಕಿಮ್ಸ್, ಹುಬ್ಬಳ್ಳಿ ಸಂಸ್ಥೆಗೆ ಸೇರಿದವರಾಗಿರುವುದರಿಂದ ಇವರ ಮುಂಬಡ್ತಿ ಹಾಗೂ ಇತರೆ ಅಹವಾಲುಗಳ ಬಗ್ಗೆ ಮಾತೃ ಇಲಾಖೆಯಾದ ಕಿಮ್ಸ್, ಹುಬ್ಬಳ್ಳಿಯಲ್ಲಿಯೇ ಮನವಿಗಳನ್ನು ಸಲ್ಲಿಸುವಂತೆ ನಿರ್ದೇಶಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ. ಆಕುಕ / 180/ ಎಂಎಂಇ / 2015 ದಿನಾಂಕ 13.07.2015 ಹಾಗೂ ಸರ್ಕಾರದ ಆದೇಶ ಸಂಖ್ಯೆ. ಆಕುಕ / 179 / ಎಂಎಂಇ / 2015 ದಿನಾಂಕ 13.07.2015ರನ್ವಯ ಡಾ. ವಿ.ಬಿ. ಮಾಲಿ ಪಾಟೀಲ್ ಹಾಗೂ ಡಾ. ಪುಷ್ಪಾಂಜಲಿ ಮಾಲಿ ಪಾಟೀಲ್ ಇವರುಗಳ ನಿಯೋಜನೆ ಅವಧಿಯು ಪೂರ್ಣಗೊಂಡಿದ್ದಲ್ಲಿ ಮಾತ್ರ ಇಲಾಖೆಗೆ ಹಿಂದುರುಗಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ.

ಕಾರಣ ಡಾ. ವಿ.ಬಿ. ಮಾಲಿ ಪಾಟೀಲ್ ಹಾಗೂ ಡಾ. ಪುಷ್ಪಾಂಜಲಿ ಮಾಲಿ ಪಾಟೀಲ್ ಇವರುಗಳನ್ನು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಹಿಂದಿರುಗಿಸುವ ಕುರಿತು ಆಡಳಿತ ಮಂಡಳಿ ಮಾರ್ಗದರ್ಶನ ಕೋರಿ ಸಲ್ಲಿಸಿದೆ.

| | | |
|---|---|---|
| (ಡಾ.ಕವಿತಾ ಪಾಟೀಲ್)<br>ನಿರ್ದೇಶಕರು,<br>ರಿಮ್ಸ್, ರಾಯಚೂರು<br>ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ರಿಮ್ಸ್ ಆಡಳಿತ ಮಂಡಳಿ ಸಭೆ,<br>ರಾಯಚೂರು | (ಎಂ. ಲಕ್ಷ್ಮೀನಾರಾಯಣ, ಭಾ.ಆ.ಸೇ<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆಕುಕ, ವೈದ್ಯಕೀಯ ಶಿಕ್ಷಣ,<br>ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ<br>ಮಂಡಳಿ ಸಭೆ, ರಾಯಚೂರು | (ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),<br>ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ<br>ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,<br>ರಿಮ್ಸ್, ರಾಯಚೂರು |

ಸಭೆಯ ತೀರ್ಮಾನ :-

ಡಾ. ವಿ.ಬಿ. ಮಾಲಿ ಪಾಟೀಲ್ ಹಾಗೂ ಡಾ. ಪುಷ್ಪಾಂಜಲಿ ಮಾಲಿ ಪಾಟೀಲ್ ವೈದ್ಯರುಗಳ ಖಾಯಂ ಪೂರ್ವ ಸೇವಾವಧಿಯನ್ನು ಈವರೆಗೆ ಘೋಷಿಸದೇ ಇರುವುದರಿಂದ ಹಾಗೂ ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿಯಿಂದ ಸದರಿ ವೈದ್ಯರ ಅಂತಿಮ ವೇತನ ಪ್ರಮಾಣ ಪತ್ರ ರಿಮ್ಸ್ ಸಂಸ್ಥೆಗೆ ಸ್ವೀಕೃತವಾಗದೇ ಇರುವುದರಿಂದ ಈ ಕೆಳಕಂಡಂತೆ ಸಮಿತಿಯನ್ನು ರಚಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಅನುಮೋದನೆ ನೀಡಲಾಯಿತು.

| ಕ್ರಮ ಸಂಖ್ಯೆ | ಪದನಾಮ | |
|---|---|---|
| 1 | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು | ಅಧ್ಯಕ್ಷರು |
| 2 | ಸರ್ಕಾರದ ಉಪ ಕಾರ್ಯದರ್ಶಿಗಳು, ಆಕುಕ, ವೈದ್ಯಕೀಯ ಶಿಕ್ಷಣ | ಸದಸ್ಯರು |
| 3 | ನಿರ್ದೇಶಕರು, ರಿಮ್ಸ್, ರಾಯಚೂರು | ಸದಸ್ಯರು |
| 4 | ನಿರ್ದೇಶಕರು, ಕಿಮ್ಸ್, ಹುಬ್ಬಳ್ಳಿ | ಸದಸ್ಯರು |
| 5 | ವೈದ್ಯಕೀಯ ಅಧೀಕ್ಷಕರು, ಕಿಮ್ಸ್, ಹುಬ್ಬಳ್ಳಿ | ಸದಸ್ಯರು |

| | |
|---|---|
| ವಿಷಯ ಸೂಚಿ ಸಂಖ್ಯೆ. 17 | ಶ್ರೀ ಮತಿ ಈರಮ್ಮ, ಲಿಪಿಕರು, ರಿಮ್ಸ್, ರಾಯಚೂರು ಇವರಿಗೆ ಹೆರಿಗೆ ರಜೆಯನ್ನು ಮಂಜೂರು ಮಾಡುವ ಬಗ್ಗೆ. |

ಶ್ರೀಮತಿ ಈರಮ್ಮ ಇವರು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಂಚಿತ ವೇತನದ ಆಧಾರದ ಮೇಲೆ ಲಿಪಿಕರಾಗಿ ಕಳೆದ 09 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರು ಜುಲೈ – 2016 ರಿಂದ ಅಕ್ಟೋಬರ್ – 2016 ರವರೆಗೆ ಒಟ್ಟು 03 ತಿಂಗಳುಗಳ ಕಾಲ ಹೆರಿಗೆ ರಜೆಯ ಮೇಲೆ ತೆರಳುವುದಾಗಿ ತಿಳಿಸಿ, 03 ತಿಂಗಳುಗಳ ಕಾಲ ಹೆರಿಗೆ ರಜೆಯನ್ನು ಮಂಜೂರು ಮಾಡುವಂತೆ ಕೋರಿ ದಿನಾಂಕ 11.04.2016 ರಂದು ಈ ಕಾರ್ಯಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ / 24 / ಸೇಸ / 2014 ದಿನಾಂಕ 19.09.2014 ರನ್ವಯ ದಿನಗೂಲಿ / ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮಹಿಳಾ ನೌಕರರಿಗೆ 180 ದಿನಗಳ ಕಾಲ ಹೆರಿಗೆ ರಜೆಯನ್ನು ಮಂಜೂರು ಮಾಡುಲು ಅನುಮೋದನೆಯನ್ನು ನೀಡಿರುತ್ತಾರೆ. ಅದೇ ರೀತಿ ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಇವರು ಸಹ ರಾಜ್ಯದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮಹಿಳಾ ಅಧಿಕಾರಿಗಳು / ಸಿಬ್ಬಂದಿಗಳಿಗೆ 180 ದಿನಗಳ ವೇತನ ಸಹಿತ ಪ್ರಸೂತಿ ರಜೆಯನ್ನು ಮಂಜೂರು ಮಾಡಲು ಅನುಮೋದನೆ ನೀಡಿರುತ್ತಾರೆ.

ಶ್ರೀಮತಿ ಈರಮ್ಮ, ಇವರು ಸಹ ನಾನು ಆರ್ಥಿಕವಾಗಿ ತುಂಬಾ ಬಡವಳಾಗಿದ್ದು, ನನಗೆ ವಯಸ್ಸಾದ ತಂದೆ ತಾಯಿ ಇರುವುದರಿಂದ ಕುಟುಂಬದ ನಿರ್ವಹಣೆಯನ್ನು ಸಹ ನಿರ್ವಹಿಸುವುದು ತುಂಬಾ ಕಷ್ಟಕರವಾಗಿರುತ್ತದೆಯಂದು ತಿಳಿಸಿ, ಈ ಮೇಲೆ ವಿವರಿಸಿದ ಸರ್ಕಾರದ ಆದೇಶದಂತೆ ಹೆರಿಗೆ ರಜೆಯನ್ನು ಮಂಜೂರು ಮಾಡಲು ತಿಳಿಸಿರುತ್ತಾರೆ.

ಕಾರಣ ಶ್ರೀಮತಿ ಈರಮ್ಮ, ಲಿಪಿಕರು, ರಿಮ್ಸ್, ರಾಯಚೂರು ಇವರಿಗೆ ಸರ್ಕಾರದ ಆದೇಶದಂತೆ ಜುಲೈ – 2016 ರಿಂದ ಅಕ್ಟೋಬರ್ – 2016ರವರೆಗೆ ಒಟ್ಟು 03 ತಿಂಗಳುಗಳ ಕಾಲ ವೇತನ ಸಹಿತ ಹೆರಿಗೆ ರಜೆಯನ್ನು ಮಂಜೂರು ಮಾಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಸಭೆಯ ತೀರ್ಮಾನ :–

ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ / 24 / ಸೇಸ / 2014 ದಿನಾಂಕ 19.09.2014 ರನ್ವಯ ದಿನಗೂಲಿ / ಗುತ್ತಿಗೆ / ಸಂಚಿತ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮಹಿಳಾ ನೌಕರರಿಗೆ 180 ದಿನಗಳ ಪ್ರಸೂತಿ ರಜೆಯನ್ನು ಮಂಜೂರು ಮಾಡಲು ಅನುಮೋದನೆ ನೀಡಿರುವುದರಿಂದ ಶ್ರೀಮತಿ ಈರಮ್ಮ, ಲಿಪಿಕರು, ರಿಮ್ಸ್ ರಾಯಚೂರು ಇವರಿಗೆ 180 ದಿನಗಳ ವೇತನ ಸಹಿತ ಹೆರಿಗೆ ರಜೆಯನ್ನು ಮಂಜೂರು ಮಾಡಲು ಆಡಳಿತ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

ಹಾಗೂ ಮುಂಬರುವ ದಿನಗಳಲ್ಲಿ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರ ದಿನಗೂಲಿ / ಗುತ್ತಿಗೆ / ಸಂಚಿತ ಮಹಿಳಾ ನೌಕರರು ಮೊದಲ ಎರಡು ಪ್ರಸೂತಿ ರಜೆಗೆ ಮನವಿ ಸಲ್ಲಿಸಿದಲ್ಲಿ ಮೇಲ್ಕಂಡ ಆದೇಶದನ್ವಯ 180 ದಿನಗಳ ಪ್ರಸೂತಿ ರಜೆಯನ್ನು ವೇತನ ಸಹಿತವಾಗಿ ಮಂಜೂರು ಮಾಡಲು ಮತ್ತು ದಿನಗೂಲಿ / ಗುತ್ತಿಗೆ / ಸಂಚಿತ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪುರುಷ ನೌಕರರಿಗೆ 15 ದಿನಗಳ ಪಿತೃತ್ವ ರಜೆಯನ್ನು ವೇತನ ಸಹಿತವಾಗಿ ಮಂಜೂರು ಮಾಡಲು ಆಡಳಿತ ಮಂಡಳಿಯು ಅನುಮತಿ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ : 18 | ಶ್ರೀ ಯಜ್ರಯ್ಯ, ಪ್ರಥಮ ದರ್ಜೆ ಸಹಾಯಕರು ಇವರ ನಿಯೋಜನೆಯ ಕುರಿತು. |
|---|---|

ಶ್ರೀ ಯಜ್ರಯ್ಯ, ಪ್ರಥಮ ದರ್ಜೆ ಸಹಾಯಕರು, ರಿಮ್ಸ್, ರಾಯಚೂರು ಇವರು ನಿರ್ದೇಶಕರು, ಆಕುಕ ಸೇವೆಗಳು, ಬೆಂಗಳೂರು ಇವರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ. ಲಿಪಿಕ (1) /313/2009–10 ದಿನಾಂಕ 29.07.2009 ಆದೇಶದನ್ವಯ ರಿಮ್ಸ್, ರಾಯಚೂರಿಗೆ ಪ್ರ.ದ.ಸ ಹುದ್ದೆಗೆ ಪದನೋನ್ನತಿ ಮೇರೆಗೆ ನಿಯೋಜಿಸಲಾಗಿದ್ದು, ರಿಮ್ಸ್ ಸಂಸ್ಥೆಯಲ್ಲಿ ದಿನಾಂಕ 07.08.2009 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿಯವರು ರಿಮ್ಸ್ ಸಂಸ್ಥೆಯಲ್ಲಿ ಉತ್ತಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ಪ್ರಕಾರ ಸಿಬ್ಬಂದಿ ನಿಯೋಜನೆಯನ್ನು ಕನಿಷ್ಟ ಐದು ವರ್ಷಗಳಿಗೆ ಮಾತ್ರ ಸೇವೆ ಪಡೆಯಲು ಅವಕಾಶವಿರುತ್ತದೆ.

ಕಾರಣ ಶ್ರೀ ಯಜ್ರಯ್ಯ, ಪ್ರಥಮ ದರ್ಜೆ ಸಹಾಯಕರು ಇವರ ನಿಯೋಜನೆಯ ಕುರಿತು ಆಡಳಿತ ಮಂಡಳಿಯ ಮುಂದಿನ ಮಾರ್ಗದರ್ಶನ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಶ್ರೀ ಯಜ್ರಯ್ಯ, ಪ್ರಥಮ ದರ್ಜೆ ಸಹಾಯಕರು ಇವರು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ಪ್ರಕಾರ ಐದು ವರ್ಷಗಳ ನಿಯೋಜನೆ ಸೇವೆಯನ್ನು ಪೂರ್ಣಗೊಳಿಸಿರುವುದರಿಂದ ಸದರಿಯವರ ಸೇವೆಯನ್ನು ಮಾತೃ ಇಲಾಖೆಗೆ ಹಿಂದುರುಗಿಸಲು ಅನುಮತಿ ನೀಡಲಾಯಿತು. ಒಂದು ವೇಳೆ ಸದರಿ ಸಿಬ್ಬಂದಿಯವರ ಸೇವೆಯು ಸಂಸ್ಥೆಗೆ ಅವಶ್ಯಕವೆನಿಸಿದಲ್ಲಿ ಪುನಃ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದಿಂದ ವಾಪಾಸ್ ಕರೆಯಿಸಿಕೊಳ್ಳಲು ಆಡಳಿತ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ – 19 | 5ನೇ ಆಡಳಿತ ಮಂಡಳಿಯ ಅನುಮೋದನೆ ಮೇರಗೆ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳ ಖಾಯಂ ನೇಮಕಾತಿ ಮಾಡಲಾಗಿದ್ದು, ಖಾಯಂ ನೇಮಕಾತಿ ಮಾಡಿರುವ ಕುರಿತು, ಮಹಾಲೇಖಪಾಲರು, ಬೆಂಗಳೂರು ಇವರು ಆಕ್ಷೇಪಣೆ ಸಲ್ಲಿಸಿರುವ ಬಗ್ಗೆ. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಈ ಕೆಳಕಂಡ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳನ್ನು ದಿನಾಂಕ 21.09.2007 ರಂದು ಜರುಗಿದ 5ನೇ ಆಡಳಿತ ಮಂಡಳಿ ಸಭೆಯ ಅನುಮೋದನೆ ಪಡೆದು ಖಾಯಂ ನೇಮಕಾತಿ ಮಾಡಲಾಗಿದ್ದು, ಖಾಯಂ ನೇಮಕಾತಿ ಮಾಡಲಾದ ಗ್ರೂಪ್ ಸಿ ಮತ್ತು

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಗ್ರೂಪ್ ಡಿ ಸಿಬ್ಬಂದಿಗಳ ಪಟ್ಟಿಗೆ ಆಡಳಿತ ಮಂಡಳಿ ಅಧ್ಯಕ್ಷರ ಸಹಿ ಇರದೇ ಇರುವುದರಿಂದ ದಿನಾಂಕ 21.12.2009 ರಿಂದ 02.01.2011ರವರೆಗೆ ರಿಮ್ಸ್ ಸಂಸ್ಥೆಯಲ್ಲಿ ಜರುಗಿದ ಮೊದಲ ಲೆಕ್ಕ ಪತ್ರ ತಪಾಸಣೆಯಲ್ಲಿ ಮಹಾಲೇಖಪಾಲರು, ಬೆಂಗಳೂರು ಇವರು ಈ ನೇಮಕಾತಿ ಕುರಿತು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಖಾಯಂ ನೇಮಕಾತಿ ಮಾಡಲಾದ ಬೋಧಕೇತರ ಸಿಬ್ಬಂದಿಗಳ ವಿವರ ಈ ಕೆಳಗಿನಂತಿದೆ.

| ಕ್ರಮ ಸಂಖ್ಯೆ | ಹೆಸರು | ಪದನಾಮ | ಕರ್ತವ್ಯಕ್ಕೆ ಹಾಜರಾದ ದಿನಾಂಕ |
|---|---|---|---|
| 1 | ಶ್ರೀಮತಿ ರೀನಾ ಪೌನಿ ಪಗಾರ್ | ಹೆಲ್ತ್ ಎಜುಕೇಟರ್ | 01.09.2006 |
| 2 | ಶ್ರೀಮತಿ ಸಮಾಪ್ತಿ ಸಿಂಥೆ | ಪ್ರಯೋಗ ಶಾಲ ತಂತ್ರಜ್ಞರು | 01.09.2006 |
| 3 | ಶ್ರೀ.ಪಿ. ಶೇಖರ್ | ಪ್ರ.ದ.ಸ | 01.02.2007 |
| 4 | ಶ್ರೀ ನರಸಿಂಹಲು | ಪ್ರಯೋಗಶಾಲ ತಂತ್ರಜ್ಞರು | 01.03.2007 |
| 5 | ಶ್ರೀ ಜಬೀವುಲ್ಲಾ | ಅಟೆಂಡರ್ | 01.02.2007 |
| 6 | ಶ್ರೀ ಮೊಹಮ್ಮದ್ ಆರೀಫ್ | ಅಟೆಂಡರ್ | 01.02.2007 |

ಈ ಸಂಬಂಧವಾಗಿ ದಿನಾಂಕ 14.05.2014 ರಂದು ಜರುಗಿದ 9ನೇ ಆರ್ಥಿಕ ಮಂಡಿಸಲಾಗಿ ಸಮಯದ ಅಭಾವವಿರುವ ಕಾರಣ ಸದರಿ ವಿಷಯವನ್ನು ಕೂಲಂಕೂಷವಾಗಿ ಪುನಃ ಪರಿಶೀಲಿಸಿ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಗಿತ್ತು.

ಈ ಮೇಲೆ ವಿವರಿಸಿದ ಸಿಬ್ಬಂದಿಗಳಲ್ಲಿ ಶ್ರೀಮತಿ ರೀನಾ ಪೌನಿ ಪಗಾರ್ ಇವರು ಅನಧಿಕೃತ ಗೈರು ಹಾಜರಿ ಆಗಿರುವುದರಿಂದ ಸದರಿಯವರಿಗೆ 3 ಬಾರಿ ನೋಟಿಸ್ ಜಾರಿ ಮಾಡಿದರೂ ಸಹ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಇರುವುದರಿಂದ, ಸದರಿಯವರನ್ನು ಸೇವೆಯನ್ನು ವಜಾಗೊಳಿಸಲಾಗಿದೆ. ಕ್ರಮ ಸಂಖ್ಯೆ. 03ರಲ್ಲಿನ ಶ್ರೀ ಶೇಖರ್ ಇವರು ಪ್ರ.ದ.ಸ ಹುದ್ದೆಗೆ ನಿಗದಿತ ವಿದ್ಯಾರ್ಹತೆ ಹೊಂದದೇ ಇರುವುದರಿಂದ ಸದರಿಯರಿಗೆ ಆರ್ಥಿಕ ಸಮಿತಿ ಸಭೆಯ ನಿರ್ದೇಶನದಂತೆ, ಪ್ರ.ದ.ಸ ಹುದ್ದೆಯಿಂದ ದ್ವಿ.ದ.ಸ ಹುದ್ದೆಗೆ ಬಡ್ತಿ ನೀಡಿ ಸರ್ಕಾರದ ನಿರ್ದೇಶನದಂತೆ ಮೈಸೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾವಣೆ ಮಾಡಲಾಗಿರುತ್ತದೆ. ಇನ್ನುಳಿದ ಕ್ರಮ ಸಂಖ್ಯೆ. 2, ಕ್ರಮ ಸಂಖ್ಯೆ. 4, ಕ್ರಮ ಸಂಖ್ಯೆ. 5 ಮತ್ತು ಕ್ರಮ ಸಂಖ್ಯೆ. 6ರಲ್ಲಿನ ಸಿಬ್ಬಂದಿಗಳು ಪ್ರಸ್ತುತ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿರುತ್ತಾರೆ.

ಆರ್ಥಿಕ ಸಮಿತಿ ಸಭೆಯ ನಿರ್ದೇಶನದಂತೆ ಪುನಃ ಪರಿಶೀಲಿಸಲಾಗಿದ್ದು, ಕ್ರಮ ಸಂಖ್ಯೆ. 02 ಮತ್ತು ಕ್ರಮ ಸಂಖ್ಯೆ. 04 ರಲ್ಲಿನ ಪ್ರಯೋಗಶಾಲ ಸಿಬ್ಬಂದಿಗಳು ಈಗಾಗಲೇ 8 ವರ್ಷಗಳ ಸೇವೆಯನ್ನು ಪೂರೈಸಿ, ನಿಗದಿತ ಇಲಾಖ ಪರಿಕ್ಷೇಯಲ್ಲಿ ಉತ್ತೀರ್ಣರಾಗಿರುತ್ತಾರೆ. ಸದರಿಯವರು ಈವರೆಗೆ ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡದೇ ಇರುವುದರಿಂದ, ತಮ್ಮ ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡಿ, ವಾರ್ಷಿಕ ವೇತನ ಮುಂಬಡ್ತಿ ನೀಡುವಂತೆ ಕೋರಿರುತ್ತಾರೆ.

ಈ ಸಂಬಂಧವಾಗಿ ದಿನಾಂಕ 13.10.2015 ರಂದು ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 10ನೇ ಆರ್ಥಿಕ ಮಂಡಳಿ ಸಭೆಯ ವಿಷಯ ಸೂಚಿ ಸಂಖ್ಯೆ. 10 ರಲ್ಲಿ ಮಂಡಿಸಲಾಗಿತ್ತು. ಆರ್ಥಿಕ ಸಮಿತಿಯು ಈ ಪರಿಶೀಲಿಸಿ, ಮುಂಬರುವ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸುವಂತೆ ಸೂಚಿಸಲಾಗಿರುತ್ತದೆ.

ಕಾರಣ ಮಹಾಲೇಖಪಾಲರು, ಬೆಂಗಳೂರು ಇವರು ಸಲ್ಲಿಸಿರುವ ಆಕ್ಷೇಪಣೆಗೆ ಅನುಪಾಲನಾ ವರದಿಯನ್ನು ಸಲ್ಲಿಸಬೇಕಾಗಿರುವುದರಿಂದ ಈ ಮೇಲ್ಕಂಡ ಗ್ರೂಪ್ ಸಿ ಮತ್ತು ಗ್ರೂಫ್ ಡಿ ಸಿಬ್ಬಂದಿಗಳ ನೇಮಕಾತಿಯನ್ನು ಸಕ್ರಮಗೊಳಿಸಿ, ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡಿ ವಾರ್ಷಿಕ ವೇತನ ಮುಂಬಡ್ತಿ ನೀಡುವ ಬಗ್ಗೆ ಆಡಳಿತ ಮಂಡಳಿ ಸಭೆಯ ಮಾರ್ಗದರ್ಶನ ಕೋರಿ ಸಲ್ಲಿಸಿದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 5ನೇ ಆಡಳಿತ ಮಂಡಳಿಯ ಅನುಮೋದನೆ ಮೇರಗೆ ಖಾಯಂ ನೇಮಕಾತಿ ಮಾಡಿಕೊಳ್ಳಲಾದ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳ ಸಂಪೂರ್ಣ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 20 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಇತರ ಸ್ವಾಯತ್ತ ಸಂಸ್ಥೆಗಳಿಗೆ ವರ್ಗಾಯಿಸುವ ಬಗ್ಗೆ. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಬೋಧಕೇತರ ಸಿಬ್ಬಂದಿಗಳು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ಇತರ ಸ್ವಾಯತ್ತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾವಣೆ ಮಾಡುವಂತೆ ಕೋರಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ.

ಸರ್ಕಾರದ ಪತ್ರ ಸಂಖ್ಯೆ. ಆಕುಕ / 375/ ಎಂಎಂಇ / 2015 ದಿನಾಂಕ 23.12.2015, ಸರ್ಕಾರದ ಪತ್ರ ಸಂಖ್ಯೆ. ಆಕುಕ / 346 / ಎಂಎಂಇ / 2015 ದಿನಾಂಕ 07.12.2015, ಸರ್ಕಾರದ ಪತ್ರ ಸಂಖ್ಯೆ. ಆಕುಕ / 322 / ಎಂಎಂಇ / 2015 ದಿನಾಂಕ 13.10.2015, ಸರ್ಕಾರದ ಪತ್ರ ಸಂಖ್ಯೆ. ಆಕುಕ / 347 / ಎಂಎಂಇ / 2015 ದಿನಾಂಕ 26.11.2015 ಮತ್ತು ಸರ್ಕಾರದ ಪತ್ರ ಸಂಖ್ಯೆ. ಆಕುಕ / 01 / ಎಂಎಂಇ / 2016 ದಿನಾಂಕ 29.01.2016 ರನ್ವಯ ವರ್ಗಾವಣೆ ಮಾರ್ಗಸೂಚಿಗಳನ್ವಯ ಎರಡು ಸಂಸ್ಥೆಗಳ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಬೇಕಾಗಿರುವುದರಿಂದ ಸದರಿ ಸಿಬ್ಬಂದಿಗಳ ಬಗ್ಗೆ ಆಡಳಿತ ಮಂಡಳಿಯಲ್ಲಿ ಮಂಡಿಸಿ, ಆಡಳಿತ ಮಂಡಳಿಯ ನಿರ್ಧಾರದಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಕಾರಣ ಸರ್ಕಾರದ ಪತ್ರಗಳನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ಇತರ ಸ್ವಾಯತ್ತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾವಣೆ ಬಯಸಿರುವ ಬೋಧಕೇತರ ಸಿಬ್ಬಂದಿಗಳನ್ನು ವರ್ಗಾವಣೆ ಮಾಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

| ಕ್ರಮ ಸಂಖ್ಯೆ. | ಸಿಬ್ಬಂದಿಯ ಹೆಸರು | ಪದನಾಮ | ವರ್ಗಾವಣೆ ಬಯಸಿದ ಸ್ವಾಯತ್ತ ಸಂಸ್ಥೆ |
|---|---|---|---|
| 1 | ಶ್ರೀ ಶಿವರಾಜ ಚವಡಿ | ಪ್ರಯೋಗಶಾಲ ತಂತ್ರಜ್ಞರು | ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ |
| 2 | ಶ್ರೀಮತಿ ಸವಿತಾ ಹೆಚ್.ಬಿ | ಪ್ರಯೋಗಶಾಲ ತಂತ್ರಜ್ಞರು | ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ |
| 3 | ಶ್ರೀಮತಿ ಜ್ಯೋತಿ ಎಂ. ಗುಜ್ಜಳ | ಪ್ರಯೋಗಶಾಲ ತಂತ್ರಜ್ಞರು | ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ |
| 4 | ಶ್ರೀ ಶರಣಪ್ಪ ಹಡಗಲಿ | ಪ್ರಯೋಗಶಾಲ ತಂತ್ರಜ್ಞರು | ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ |
| 5 | ಶ್ರೀ ಬಿ.ಟಿ ವಿಜಯಕುಮಾರ್ | ಪ್ರಯೋಗಶಾಲ ತಂತ್ರಜ್ಞರು | ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ |
| 6 | ಶ್ರೀ ಹನುಮಂತಪ್ಪ ಹೊಸಕಟ್ಟಿ | ಕ್ಷ – ಕಿರಣ ತಂತ್ರಜ್ಞರು | ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ |
| 7 | ಶ್ರೀ ಶಿವಬಸಪ್ಪ | ಕ್ಷ – ಕಿರಣ ತಂತ್ರಜ್ಞರು | ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ |
| 8 | ಶ್ರೀ ಬಾಳಪ್ಪ ಪೂಜಾರಿ | ಶುಶ್ರೂಷಕರು | ಡಿಮಾನ್ಸ್, ಧಾರವಾಡ |
| 9 | ಶ್ರೀ ಕೀರ್ತಿ | ಶುಶ್ರೂಷಕಿ | ಬೆಂಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ |

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

<u>ಸಭೆಯ ತೀರ್ಮಾನ :-</u>

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಪ್ರಯೋಗಶಾಲ ತಂತ್ರಜ್ಞರು ಹಾಗೂ ಶುಶ್ರೂಷಕರ ಬಹುತೇಕ ಹುದ್ದೆಗಳ ಖಾಲಿಯಿರುವುದರಿಂದ, ವರ್ಗಾವಣೆ ಕೋರಲಾದ ಸಿಬ್ಬಂದಿಗಳನ್ನು ಬಿಡುಗಡೆ ಮಾಡದೇ ಇರಲು ಆಡಳಿತ ಮಂಡಳಿಯು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ನಿರ್ದೇಶನ ನೀಡಲಾಯಿತು.

ಹಾಗೂ ಶ್ರೀ ಕೀರ್ತಿ, ಶುಶ್ರೂಷಕರು, ಬೆಂಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಶ್ರೀ ಶಿವಬಸಪ್ಪ, ಕ್ಷ – ಕಿರಣ ತಂತ್ರಜ್ಞರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ ಇವರು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾವಣೆ ಮೇಲೆ ಬರಲು ಇಚ್ಚಿಸಿರುವುದರಿಂದ ವರ್ಗಾವಣೆ ಮೇಲೆ ರಿಮ್ಸ್ ಸಂಸ್ಥೆಗೆ ಬರಲು ಆಡಳಿತ ಮಂಡಳಿಯು ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 21 | ವೈದ್ಯಕೀಯ ಸೀಟುಗಳನ್ನು 100 ರಿಂದ 150ಕ್ಕೆ ಹೆಚ್ಚಿಸಲು ಅವಶ್ಯವಿರುವ 250 ಹಾಸಿಗೆಗಳ ಸುಸಜ್ಜಿತ ಎಂ.ಸಿ.ಹೆಚ್ ಆಸ್ಪತ್ರೆಯನ್ನು ನಿರ್ಮಾಣ ಮಾಡಲು ಅನುಮತಿ ನೀಡುವ ಬಗ್ಗೆ |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿನಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ, 2007–08ನೇ ಸಾಲಿನಿಂದ 100 ವೈದ್ಯಕೀಯ ಸೀಟುಗಳನ್ನು ಹಂಚಿಕೆ ಮಾಡಲಾಗಿದ್ದು, ಭಾರತೀಯ ವೈದ್ಯಕೀಯ ಮಂಡಳಿಯಿಂದ ಈಗಾಗಲೇ ಅಂತಿಮ ಮಾನ್ಯತೆಯು ಸಹ ದೊರೆತಿರುತ್ತದೆ. ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸುವ ಸಂಬಂಧ ಸರ್ಕಾರದ ಹಂತದಲ್ಲಿ ಸಭೆಗಳನ್ನು ಜರುಗಿಸಲಾಗಿದ್ದು, ಸರ್ಕಾರದ ನಿರ್ದೇಶನದಂತೆ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸಿದಲ್ಲಿ ಬೇಕಾಗುವ ಕಟ್ಟಡ, ಉಪಕರಣ ಮತ್ತು ಪೀಠೋಪಕರಣಗಳ ವಿವರವಾದ ಪ್ರಸ್ತಾವನೆಯನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಸಲ್ಲಿಸಲಾಗಿರುತ್ತದೆ. ಆದರೆ ಪ್ರಸ್ತುತ ರಿಮ್ಸ್ ಬೋಧಕ ಆಸ್ಪತ್ರೆಯು ಸದ್ಯ 500 ಹಾಸಿಗೆಗಳ ಸಾಮಾರ್ಥ್ಯವನ್ನು ಹೊಂದಿದ್ದು, ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸಿದಲ್ಲಿ ಇನ್ನು 250 ಹಾಸಿಗೆಗಳ ಕೊರತೆಯಾಗುತ್ತದೆ.

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸಲು ಅವಶ್ಯವಿರುವ 250 ಹಾಸಿಗೆಗಳ ಸಾಮರ್ಥ್ಯದ ಎಂ.ಸಿ.ಹೆಚ್ ಆಸ್ಪತ್ರೆಯ ಕಾಮಗಾರಿಯ ಅಂದಾಜು ಪಟ್ಟಿಯನ್ನು ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆ **(KHSRDP)** ಇವರಿಂದ ಪಡೆದು ಮುಂದಿನ ಕ್ರಮಕ್ಕೈಗೊಳ್ಳಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

<u>ಸಭೆಯ ತೀರ್ಮಾನ :-</u>

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಪ್ರಸ್ತುತ 500 ಹಾಸಿಗೆಗಳ ಸೌಲಭ್ಯವಿದ್ದು, ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸಲು ಇನ್ನು 150 ಹಾಸಿಗೆಗಳ ಎಂ.ಸಿ.ಹೆಚ್ ಆಸ್ಪತ್ರೆಯ ಅವಶ್ಯಕತೆಯಿರುವುದರಿಂದ, ಹಾಗೂ ಎಂ.ಸಿ.ಹೆಚ್ ಆಸ್ಪತ್ರೆಯು ಭಾರತೀಯ ವೈದ್ಯಕೀಯ ಮಂಡಳಿಯ 3ನೇ ವರ್ಷದ ನವೀಕರಣಕ್ಕೆ ಬೇಕಾಗಿರುವುದರಿಂದ ರಿಮ್ಸ್ ಅಧೀನದಲ್ಲಿರುವ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಹಾಸಿಗೆಯ ಸಾಮಾರ್ಥ್ಯವನ್ನೇ ಭಾರತೀಯ ವೈದ್ಯಕೀಯ ಮಂಡಳಿಗೆ ತೋರಿಸಲು ಅನುಮತಿ ನೀಡಲಾಯಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮಿನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಪ್ರಸ್ತುತ ಲಭ್ಯವಿರುವ ಎಲ್ಲಾ ಸೌಲಭ್ಯಗಳನ್ನು ಹೊರತು ಪಡಿಸಿ, ಉದ್ದೇಶಿತ ಸೌಲಭ್ಯಗಳ ಕುರಿತು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 22 | ರಾಜೀವಗಾಂಧಿ ಸೂಪರ್ ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಯಲ್ಲಿ ರೂ.8000/– ಸ್ಟೈಪಂಢರಿ ಅಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ "ಸಿ"ವೃಂದದ ಸಿಬ್ಬಂದಿಗಳಿಗೆ ವೇತನವನ್ನು ಹೆಚ್ಚಿಸಲು ಅನುಮೋದನೆ ನೀಡುವ ಕುರಿತು. |

ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಹೈದ್ರಾಬಾದಿನ ಅಪೋಲೋ ಸಮೂಹಕ್ಕೆ ಗುತ್ತಿಗೆ ನೀಡಲ್ಪಟ್ಟ ರಾಜೀವ್ ಗಾಂಧಿ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಯನ್ನು ಸರ್ಕಾರದ ಆದೇಶ ಸಂಖ್ಯೆ. ಆಕುಕ / 282 / ಸಿಜಿಎಂ / 2012/ ದಿನಾಂಕ :24.05.2012ರನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನಕ್ಕೆ ಸದ್ಯ ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ ದಿನಾಂಕ 01.06.2012ರಿಂದ ಹಸ್ತಾಂತರಿಸಿ ಕೊಳ್ಳಲು ಸೂಚಿಸಿದ ಹಿನ್ನಲೆಯಲ್ಲಿ ಅಪೋಲೋ ಸಮೂಹದಿಂದ ನೇಮಕಾತಿ ಹೊಂದಿ ಕರ್ತವ್ಯ ನಿರ್ವಹಿಸುತ್ತಿದ್ದ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳನ್ನು ಮಾನವೀಯ ಹಿತದೃಷ್ಟಿಯಿಂದ ಅವರುಗಳ ಸೇವೆಯನ್ನ ಓಪೆಕ್ ಆಸ್ಪತ್ರೆಯಲ್ಲಿ ಮುಂದುವರೆಸಲಾಗಿದೆ.

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ದಿನಾಂಕ 01.11.2013 ರಂದ ಪ್ರಾರಂಭಿಸಲಾಗಿದೆ. ಸದರಿ ಸಿಬ್ಬಂದಿಗಳಿಗೆ ಯಾವ ವೇತನವನ್ನು ನೀಡಬೇಕೆಂಬುದರ ಬಗ್ಗೆ ರಿಮ್ಸ್ ಸಂಸ್ಥೆಯ 17 ಮತ್ತು 18ನೇ ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿತ್ತು.

ರಿಮ್ಸ್ ಸಂಸ್ಥೆಯಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯು ತೋರಿಸಿರುವ ಶುಶ್ರೂಷಕರ ನ್ಯೂನತೆಯನ್ನು ಸರಿಪಡಿಸಲು ಅವಶ್ಯವಿರುವ 100 ಶುಶ್ರೂಷಕರನ್ನು ಸರ್ಕಾರದ ಆದೇಶ ಸಂಖ್ಯೆ. ಆಕುಕ / 190 / ಎಂಎಂಇ / 2012 ದಿನಾಂಕ 04.06.2013ರನ್ವಯ ಸ್ಟೈಫಂಡರಿ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿತ್ತು. ಈ ಹಿಂದೆ ಓಪೆಕ್ ಆಸ್ಪತ್ರೆಯಲ್ಲಿ ಅಪೋಲೋ ಸಮೂಹದಿಂದ ನೇಮಕಾತಿ ಹೊಂದಿ ಕಾರ್ಯನಿರ್ವಹಿಸುತ್ತಿದ್ದ 76 ಶುಶ್ರೂಷಕರನ್ನು ಪ್ರತಿ ಮಾಹೆ ರೂ. 8,000/–ಗಳ ಸ್ಟೈಪಂಡರಿ ಆಧಾರದ ಮೇಲೆ ಮುಂದಿನ 6 ತಿಂಗಳ ಕಾಲವಧಿಗೆ ಅಥವಾ ಓಪೆಕ್ ಆಸ್ಪತ್ರೆಯ ಬೋಧಕೇತರ ಸಿಬ್ಬಂದಿ ನೇಮಕಾತಿಯಾಗುವವರೆಗೆ ಇವರೆಡರಲ್ಲಿ ಯಾವುದು ಮೊದಲೋ ಅದನ್ನು ಅನುಸರಿಸಿ ನೇಮಕಾತಿ ಮಾಡಿಕೊಳ್ಳುವಂತೆ ಅನುಮೋದನೆ ನೀಡಿದಂತೆ ಓಪೆಕ್ ಆಸ್ಪತ್ರೆಯ ಶುಶ್ರೂಷಕರನ್ನು ಸ್ಟೈಪಂಡರಿ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.

ಅದೇ ರೀತಿ ಅಪೋಲೋ ಸಮೂಹದಿಂದ ನೇಮಕಾತಿ ಹೊಂದಿದ್ದ 100 ಗ್ರೂಪ್ 'ಸಿ' ನೌಕರರನ್ನು ಪ್ರತಿ ಮಾಹೆ ರೂ. 8000/–ಗಳ **stipend** ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯು ಅನುಮತಿ ನೀಡಿತ್ತು. ಹಾಗೂ ಅಪೋಲೋ ಸಮೂಹದಿಂದ ನೇಮಕಾತಿ ಹೊಂದಿದ್ದ, 110 ಗ್ರೂಪ್ 'ಡಿ' ನೌಕರರನ್ನು ಹೊರಗುತ್ತಿಗೆ ಮೂಲಕ (ಏಜನ್ಸಿ) ಪಡೆದುಕೊಳ್ಳಲು ಸೂಚಿಸಿ, ಏಜನ್ಸಿಯವರಿಗೆ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ 110 ಗ್ರೂಪ್ 'ಡಿ' ನೌಕರರನ್ನೇ ನೇಮಕಾತಿ ಮಾಡಿಕೊಳ್ಳುವಂತೆ ಸೂಚಿಸಿದ ಹಿನ್ನಲೆಯಲ್ಲಿ ಆಡಳಿತ ಮಂಡಳಿಯ ನಿರ್ದೇಶನದಂತೆ ಕ್ರಮ ವಹಿಸಲಾಗಿದೆ.

ಆದರೆ ಓಪೆಕ್ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಸಿಬ್ಬಂದಿಗಳು ಸದ್ಯ ನೀಡುತ್ತಿರುವ ರೂ. 8000/–ಗಳ **stipend** ವೇತನವು ಅತಿ ಕಡಿಮೆಯಾಗಿದ್ದು, "ಸಿ" ವೃಂದದ ಸಿಬ್ಬಂದಿಗಳಿಗೆ ರೂ. 15,000/– ದವರೆಗೆ ಸ್ಟೈಫೆಂಡ್ ವೇತನವನ್ನು ಹೆಚ್ಚಿಸುವಂತೆ ಕೋರಿರುತ್ತಾರೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ "ಸಿ" ಸಿಬ್ಬಂದಿಗಳಿಗೆ ರೂ. 15,000/- ಗಳ ಸ್ಟೈಫೆಂಡ್ ವೇತನವನ್ನು ನಿಗದಿಪಡಿಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಗ್ರೂಪ್ ಸಿ ಹಾಗು ಗ್ರೂಪ್ ಡಿ ಸಿಬ್ಬಂದಿಗಳ ವೇತನ ತಾರತಮ್ಯ ಮತ್ತು ಸಿಬ್ಬಂದಿಗಳ ವೇತನವನ್ನು ಹೆಚ್ಚಿಸುವ ಸಂಬಂಧ ಈಗಾಗಲೇ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಸರ್ಕಾರಕ್ಕೆ ನೀಡುವ ಶಿಫಾರಸ್ಸಿನಂತೆ ವೇತನವನ್ನು ನಿಗದಿಪಡಿಸಿ ಪಾವತಿಸಲು ಆಡಳಿತ ಮಂಡಳಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 23 | ರಾಜೀವಗಾಂಧಿ ಸೂಪರ್ ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 35 ಗ್ರೂಪ್ "ಡಿ" ಸಿಬ್ಬಂದಿಗಳ ಹೊರಗುತ್ತಿಗೆಯನ್ನು ರದ್ದು ಮಾಡಿ ಸಂಸ್ಥೆಯಿಂದಲೇ ನೇಮಕಾತಿ ಮಾಡಿಕೊಳ್ಳುವ ಬಗ್ಗೆ. |

ಸರ್ಕಾರದ ಆದೇಶ ಸಂಖ್ಯೆ. ಆಕುಕ / 138 / ಎಂಇಎಸ್‌ಎಫ್ / 2011 ದಿನಾಂಕ : 04.02.2013ರನ್ವಯ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಒಟ್ಟು 35 ಗ್ರೂಪ್ "ಡಿ" ಸಿಬ್ಬಂದಿ ಹುದ್ದೆಗಳು ಮಂಜೂರಾಗಿದ್ದು, ದಿನಾಂಕ 31.07.2013ರಂದು ಜರುಗಿದ ರಾಯಚೂರು ವೈದ್ಯಕೀಯ ಮಂಡಳಿಯ ನಿರ್ದೇಶನದಂತೆ ಈ ಹಿಂದ ಅಪೋಲೋ ಸಮೂಹದಿಂದ ನೇಮಕಾತಿ ಹೊಂದಿದ್ದ, ಗ್ರೂಪ್ 'ಡಿ' ನೌಕರರನ್ನು ಮಾನವಿಯತೆಯ ಹಿತದೃಷ್ಟಿಯಿಂದ ಹೊರಗುತ್ತಿಗೆ ಮೂಲಕ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ.

ಆದರೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಡಿ ಸಿಬ್ಬಂದಿಗಳು ಪ್ರಸ್ತುತ ಕಾರ್ಮಿಕ ಇಲಾಖೆಯ ನಿಯಮದನ್ವಯ ಕನಿಷ್ಟ ವೇತನ ರೂ. 7,309/- ಗಳನ್ನು ನಿಗದಿಪಡಿಸಿದ್ದು, ಇದರಲ್ಲಿ ಎಲ್ಲಾ ಕಡಿತಗಳನ್ನು ಕಟಾಯಿಸಿ ರೂ. 4,700/- ಗಳನ್ನು ಪಾವತಿ ಮಾಡಲಾಗುತ್ತಿದೆ. ಇದರಿಂದಾಗಿ ಈ ಅತಿ ಕಡಿಮೆ ವೇತನದಲ್ಲಿ ಕುಟುಂಬ ನಿರ್ವಹಣೆ ಮಾಡುವುದು ತುಂಬಾ ಕಷ್ಟಕರವಾಗಿದ್ದು, ಈ ಹಿನ್ನಲೆಯಲ್ಲಿ ಗ್ರೂಪ್ ಡಿ ಸಿಬ್ಬಂದಿಗಳ ಸೇವೆಯನ್ನು ಪರಿಗಣಿಸಿ, ಸಂಸ್ಥೆಯ ವತಿಯಿಂದ ಸ್ಟೈಫೆಂಡರಿ ವೇತನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಕೋರಿರುತ್ತಾರೆಂದು ವಿಶೇಷಾಧಿಕಾರಿಗಳು, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರು ತಿಳಿಸಿರುತ್ತಾರೆ.

ಕಾರಣ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 35 ಗ್ರೂಪ್ ಡಿ ಸಿಬ್ಬಂದಿಗಳ ಹೊರಗುತ್ತಿಗೆಯನ್ನು ಸೇವೆಯನ್ನು ರದ್ದು ಮಾಡಿ ಸಂಸ್ಥೆಯ ವತಿಯಿಂದಲೇ ಸ್ಟೈಫೆಂಡರಿ ಆಧಾರದ ಮೇಲೆ ವೇತನವನ್ನು ನಿಗದಿ ಪಡಿಸಿ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಯಲ್ಲಿ ಏಜನ್ಸಿ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ 35 ಗ್ರೂಪ್ ಡಿ ಸಿಬ್ಬಂದಿಗಳಿಗೆ ವೇತನವನ್ನು ಟೆಂಡರ್‌ದಾರರ ಮುಖಾಂತರವೇ ಹೆಚ್ಚಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಅನುಮತಿ ನೀಡಲಾಯಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| | |
|---|---|
| ವಿಷಯ ಸೂಚಿ ಸಂಖ್ಯೆ. 24 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸರ್ಕಾರದ ಆದೇಶದಂತೆ ಜಯದೇವ ಹೃದ್ರೋಗ ಸಂಸ್ಥೆಯಿಂದ ನಿಯೋಜನೆಗೊಳಿಸಿರುವ 03 ವೈದ್ಯರು ಸಹಾಯಕ ಪ್ರಾಧ್ಯಾಪಕರೆಂದು ಪದನಾಮಿಕರಿಸುವ ಕುರಿತು. |

ಸರ್ಕಾರದ ಅಧಿಸೂಚನೆ ಸಂಖ್ಯೆ ಆಕುಕ / 334 / ಹೆಚ್‌ಎಸ್‌ಹೆಚ್ / 2014 ದಿನಾಂಕ 30.09.2014ರನ್ವಯ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ತಜ್ಞ ವೈದ್ಯರುಗಳು ಲಭ್ಯವಿಲ್ಲದೇ ಇರುವುದನ್ನು ಸರ್ಕಾರವು ಮನಗಂಡು ಅತ್ಯಾವಶ್ಯವಿರುವ ಈ ಕೆಳಕಂಡ ತಜ್ಞ ವೈದ್ಯರುಗಳನ್ನು ಸರ್ಕಾರದ ಆದೇಶ ಸಂಖ್ಯೆ. ಆಕುಕ / 138 / ಎಂಎಸ್‌ಎಫ್ / 2011 ದಿನಾಂಕ : 04.02.2013ರನ್ವಯ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಮಂಜೂರಾಗಿರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಎದುರಾಗಿ ಮುಂದಿನ 05 ವರ್ಷಗಳ ಅವಧಿಗೆ ನಿಯೋಜಿಸಲಾಗಿದೆ. ಆದರೆ ಸದರಿ ವೈದ್ಯರುಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ತಜ್ಞ ವೈದ್ಯರೆಂದು ನೇಮಕಾತಿ ಹೊಂದಿದ್ದು, ಈ ಹಿನ್ನಲೆಯಲ್ಲಿ ಸದರಿ ವೈದ್ಯರುಗಳು ಓಪೆಕ್ ಆಸ್ಪತ್ರೆಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಮಂಜೂರಾಗಿರುವುದರಿಂದ ತಮ್ಮ ಸೇವೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವೈದ್ಯಕೀಯ ಶಿಕ್ಷಣ ಇಲಾಖೆಗೆ ವಿಲೀನಗೊಳಿಸಿ, ತಜ್ಞ ವೈದ್ಯರ ಬದಲಾಗಿ ಸಹಾಯಕ ಪ್ರಾಧ್ಯಾಪಕರೆಂದು ಪದನಾಮಿಕರಿಸುವಂತೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನಿಗದಿಪಡಿಸಿರುವ ವೇತನ ಶ್ರೇಣಿಯನ್ನು ನಿಗದಿಪಡಿಸಿ ಪಾವತಿಸುವಂತೆ ತಿಳಿಸಿರುತ್ತಾರೆಂದು ವಿಶೇಷಾಧಿಕಾರಿಗಳು, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರು ಕೋರಿರುತ್ತಾರೆ. ಸದರಿ ವೈದ್ಯರುಗಳ ವಿವರ ಈ ಕೆಳಗಿನಂತಿದೆ.

| ಕ್ರಮ ಸಂಖ್ಯೆ | ತಜ್ಞರ ಹೆಸರು | ತಜ್ಞತೆ |
|---|---|---|
| 01 | ಡಾ. ಗೋಪಿನಾಥ್. ಈ.ವಿ | ಕಾರ್ಡಿಯಾಲಜಿಸ್ಟ್ |
| 02 | ಡಾ. ಅಜಯ್ ತುರೆ | ಕಾರ್ಡಿಯಾಕ್ ಅನಸ್ಥೇಶಿಯಾಲಜಿಸ್ಟ್ |
| 03 | ಡಾ. ಮುರಳಿರಾವ್ | ಕಾರ್ಡಿಯಾಲಜಿಸ್ಟ್ |

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸರ್ಕಾರದ ಆದೇಶದಂತೆ ಜಯದೇವ ಹೃದ್ರೋಗ ಸಂಸ್ಥೆಯಿಂದ ನಿಯೋಜನೆಗೊಳಿಸಿರುವ 03 ವೈದ್ಯರುಗಳ ಸೇವೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಳಿಸಿ, ತಜ್ಞ ಹುದ್ದೆಯ ಬದಲಾಗಿ ಸಹಾಯಕ ಪ್ರಾಧ್ಯಾಪಕರೆಂದು ಪದನಾಮಿಕರಿಸುವಂತೆ, ವೈದ್ಯರುಗಳ ಕೊರತೆಯಿದ್ದಲ್ಲಿ ಸದರಿ ವೈದ್ಯರುಗಳ ಸೇವೆಯನ್ನು ಭಾರತೀಯ ವೈದ್ಯಕೀಯ ಮಂಡಳಿಗೆ ತೋರಿಸುವಂತೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಸಹಾಯಕ ಪ್ರಾಧ್ಯಾಪಕರಿಗೆ ನಿಗದಿಪಡಿಸಿರುವ ವೇತನ ಶ್ರೇಣಿಯನ್ನು ನಿಗದಿಪಡಿಸಿ ಪಾವತಿಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಜಯದೇವ ಹೃದ್ರೋಗ ಸಂಸ್ಥೆಯಿಂದ ನಿಯೋಜನೆಗೊಂಡು ಕಾರ್ಯನಿರ್ವಹಿಸುತ್ತಿರುವ ಡಾ. ಗೋಪಿನಾಥ್, ಕಾರ್ಡಿಯಾಲಜಿಸ್ಟ್, ಡಾ. ಅಜಯ್ ತುರೆ, ಕಾರ್ಡಿಯಾಕ್ ಅನಸ್ಥೇಶಿಯಾಲಜಿಸ್ಟ್ ಹಾಗೂ ಡಾ. ಮುರಳೀರಾವ್, ಕಾರ್ಡಿಯಾಲಜಿಸ್ಟ್ ವೈದ್ಯರುಗಳ ತಜ್ಞ ಹುದ್ದೆಯ ಬದಲಾಗಿ ಸಹಾಯಕ ಪ್ರಾಧ್ಯಾಪಕರೆಂದು ಪದನಾಮಿಕರಿಸಿಕೊಳ್ಳಲು ಆಡಳಿತ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಹಾಗೂ ರಿಮ್ಸ್ ಸಂಸ್ಥೆಯಲ್ಲಿ ವೈದ್ಯರುಗಳ ಕೊರತೆಯಿದ್ದಲ್ಲಿ ಸದರಿ ವೈದ್ಯರುಗಳ ಸೇವೆಯನ್ನು ಭಾರತೀಯ ವೈದ್ಯಕೀಯ ಮಂಡಳಿಗೆ ತೋರಿಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಯಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| | |
|---|---|
| ವಿಷಯ ಸೂಚಿ ಸಂಖ್ಯೆ. 25 | ಡಾ. ರಾಘವೇಂದ್ರ, ಸಹಾಯಕ ಪ್ರಾಧ್ಯಾಪಕರು, ಪ್ಲಾಸ್ಟಿಕ್ ಸರ್ಜರಿ ಮತ್ತು ಡಾ. ವಿಶ್ವನಾಥ ರೆಡ್ಡಿ, ಸಹಾಯಕ ಪ್ರಾಧ್ಯಾಪಕರು, ಗ್ಯಾಸ್ಟ್ರೋಎಂಟರೋಲಜಿ ವಿಭಾಗಗಕ್ಕೆ ನೇಮಕಾತಿ ಮಾಡಿಕೊಳ್ಳಲಾಗಿದ್ದು, ಘಟನೋತ್ತರ ಅನುಮೋದನೆ ನೀಡುವ ಬಗ್ಗೆ. |

ಪ್ರಸ್ತುತ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರದಿಂದ ಆಸ್ಪತ್ರೆಗೆ ಮೊದಲನೇ ಹಂತದಲ್ಲಿ ಮಂಜೂರಾದ ಬೋಧಕ ಸಿಬ್ಬಂದಿ ಭರ್ತಿ ಪ್ರಕ್ರಿಯೆಯನ್ನು ನಿಯಮಾನುಸಾರ ಜರುಗಿದ್ದು, ಸದ್ಯ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿರುವ ಎಲ್ಲಾ ವಿಭಾಗಗಳ ಜೊತೆಗೆ ಎರಡನೇ ಹಂತದಲ್ಲಿ ಮಂಜೂರು ಮಾಡಲಾದ ವಿವಿಧ ಹುದ್ದೆಗಳ ಪೈಕಿ ಕೇವಲ ಪ್ಲಾಸ್ಟಿಕ್ ಸರ್ಜರಿ ಮತ್ತು ಗ್ಯಾಸ್ಟ್ರೋಎಂಟರೋಲಜಿ ವಿಭಾಗದ ವೈದ್ಯರುಗಳ ಸೇವೆಯು ಅವಶ್ಯವಾಗಿರುವುದರಿಂದ ಹಾಗೂ ಈ ಭಾಗದ ರೋಗಿಗಳ ಹಿತದೃಷ್ಟಿಯಿಂದ ಡಾ. ರಾಘವೇಂದ್ರ ಇವರನ್ನು ಪ್ಲಾಸ್ಟಿಕ್ ಸರ್ಜರಿ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಹಾಗೂ ಡಾ. ವಿಶ್ವನಾಥ ರೆಡ್ಡಿ ಇವರನ್ನು ಗ್ಯಾಸ್ಟ್ರೋಎಂಟರಾಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲಾಗಿದೆ.

ಎರಡನೇ ಹಂತದಲ್ಲಿ ಮಂಜೂರಾದ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಇನ್ನು ಅನುಮತಿ ದೊರೆತಿರುವುದಿಲ್ಲ ಆದರೂ ತುರ್ತು ಅವಶ್ಯಕತೆ ಮೇರೆಗೆ ಹಾಗೂ ಈ ಭಾಗದ ರೋಗಿಗಳ ಹಿತದೃಷ್ಟಿಯಿಂದ ಎರಡನೇ ಹಂತದಲ್ಲಿ ಮಂಜೂರಾಗಿರುವ ಪ್ಲಾಸ್ಟಿಕ್ ಸರ್ಜರಿ ಮತ್ತು ಗ್ಯಾಸ್ಟ್ರೋಎಂಟರೋಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಕಾರಣ ಸದರಿ ವೈದ್ಯರುಗಳನ್ನು ನೇಮಕಾತಿ ಮಾಡಿಕೊಂಡಿರುವ ಪ್ರಕ್ರಿಯೆಯ ಬಗ್ಗೆ ಘಟನೋತ್ತರ ಅನುಮೋದನೆಯನ್ನು ನೀಡುವಂತೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

<u>ಸಭೆಯ ತೀರ್ಮಾನ :-</u>

2016-17ನೇ ಸಾಲಿಗೆ ಮಾನ್ಯ ಮುಖ್ಯ ಮಂತ್ರಿಗಳು ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಎರಡನೇ ಹಂತಕ್ಕೆ ಉನ್ನತಿಕರಿಸಲು ಘೋಷಣೆ ಮಾಡಿರುವುದರಿಂದ ಹಾಗೂ ಪ್ಲಾಸ್ಟಿಕ್ ಸರ್ಜರಿ ಮತ್ತು ಗ್ಯಾಸ್ಟ್ರೋಎಂಟರೋಲಜಿ ವಿಭಾಗಕ್ಕೆ ಈಗಾಗಲೇ ಎರಡನೇ ಹಂತದಲ್ಲಿ ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗಳನ್ನು ಮಂಜೂರು ಮಾಡಿರುವುದರಿಂದ ಡಾ. ರಾಘವೇಂದ್ರ, ಸಹಾಯಕ ಪ್ರಾಧ್ಯಾಪಕರು, ಪ್ಲಾಸ್ಟಿಕ್ ಸರ್ಜರಿ ಮತ್ತು ಡಾ. ವಿಶ್ವನಾಥ ರೆಡ್ಡಿ, ಸಹಾಯಕ ಪ್ರಾಧ್ಯಾಪಕರು, ಗ್ಯಾಸ್ಟ್ರೋಎಂಟರೋಲಜಿ ವಿಭಾಗಗಕ್ಕೆ ನೇಮಕಾತಿ ಮಾಡಿಕೊಂಡಿರುವ ಕುರಿತು ಆಡಳಿತ ಮಂಡಳಿಯು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 26 | ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ಜೆರಾಕ್ಸ್ ಡಬ್ಬಿ ಅಂಗಡಿಗೆ ಪರವಾನಿಗೆ ನೀಡುವ ಬಗ್ಗೆ. |

ಶ್ರೀ ಮೌನೇಶ್ ತಂದೆ ಸೂಗಪ್ಪ ಆಚಾರ್, ಮಾಡಗಿರಿ, ರಾಯಚೂರು ಜಿಲ್ಲೆಯ ನಿವಾಸಿಯಾಗಿದ್ದು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಜೆರಾಕ್ಸ್ ಸೆಂಟರ್ ಇಲ್ಲದೇ ಇರುವುದರಿಂದ, ವಿದ್ಯಾರ್ಥಿಗಳಿಗೆ ಹಾಗೂ ಆಸ್ಪತ್ರೆಗೆ ಬರುವ ಸಾರ್ವಜನಿಕರಿಗೆ ಅನುಕೂಲವಾಗುವ ಹಿನ್ನಲೆಯಲ್ಲಿ ಮತ್ತು ವೈದ್ಯಕೀಯ ಮಹಾವಿದ್ಯಾಲಯದ ಸುತ್ತಮುತ್ತ ಯಾವುದೇ ಜೆರಾಕ್ಸ್ ಸೆಂಟರ್‌ಗಳು ಇಲ್ಲದೇ ಇರುವುದರಿಂದ ಚಿಕ್ಕದಾಗಿ ಸಣ್ಣ ಡಬ್ಬಿ ಅಂಗಡಿಯಿಟ್ಟು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಮನವಿಯನ್ನು ಮಾನ್ಯ

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಜಿಲ್ಲಾಧಿಕಾರಿಗಳು, ರಾಯಚೂರು ಇವರಿಗೆ ಸಲ್ಲಿಸಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪತ್ರ ಸಂಖ್ಯೆ. ಕಂದಾಯ / ಪಿಜಿಸಿ / 23 / 2015-16 / 13140 ದಿನಾಂಕ 31.12.2015 ಮತ್ತು ದಿನಾಂಕ 04.01.2016 ರಲ್ಲಿ ಈ ಕಾರ್ಯಾಲಯಕ್ಕೆ ಸದರಿಯವರ ಮನವಿಯನ್ನು ರವಾನಿಸಲಾಗಿದ್ದು, ಸದರಿ ಅರ್ಜಿದಾರರ ಮನವಿಯಲ್ಲಿನ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಕಾರಣ ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪತ್ರ ಹಾಗೂ ಶ್ರೀ ಮೌನೇಶ್ ತಂದೆ ಸೂಗಪ್ಪ ಆಚಾರ್ ಇವರ ಮನವಿಯನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿ, ರಿಮ್ಸ್ ಆವರಣದಲ್ಲಿ ಜೆರಾಕ್ಸ್ ಅಂಗಡಿಗೆ ಅನುಮತಿ ನೀಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ಶ್ರೀ ಮೌನೇಶ್ ತಂದೆ ಸೂಗಪ್ಪ ಆಚಾರ್ ಇವರು ಜೆರಾಕ್ಸ್ ಡಬ್ಬಿ ಅಂಗಡಿ ತೆರೆಯಲು ಕೋರಿರುವ ಪ್ರಸ್ತಾವನೆಯನ್ನು ಆಡಳಿತ ಮಂಡಳಿಯು ತಿರಸ್ಕರಿಸಿ, ರಿಮ್ಸ್ ಸಂಸ್ಥೆಯ ವತಿಯಿಂದಲೇ ಒಂದು ಜೆರಾಕ್ಸ್ ಡಬ್ಬಿ ಅಂಗಡಿಯನ್ನು ತೆರೆದು ರೋಗಿಗಳು ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 27 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು |

1) ದಿನಾಂಕ 16.04.2016 ರಂದು ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 11ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳನ್ನು ಅನುಮೋದಿಸುವ ಬಗ್ಗೆ.

ಸಭೆಯ ತೀರ್ಮಾನ :-

ದಿನಾಂಕ 16.04.2016 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ. 601, ಬಹುಮಹಡಿಗಳ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 11ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳನ್ನು ಆಡಳಿತ ಮಂಡಳಿಯು ಪರಿಶೀಲಿಸಿ ಅನುಮೋದಿಸಲಾಯಿತು.

2) ಡಾ. ಭಾಸ್ಕರ್, ಪ್ರಾಧ್ಯಾಪಕರು, ಎಲುಬು ಮತು ಕೀಲು ವಿಭಾಗ, ರಿಮ್ಸ್, ರಾಯಚೂರು ಇವರನ್ನು ಮೈಸೂರಿಗೆ ವರ್ಗಾಯಿಸುವ ಬಗ್ಗೆ.

ಸಭೆಯ ತೀರ್ಮಾನ :-

ಡಾ. ಭಾಸ್ಕರ್, ಪ್ರಾಧ್ಯಾಪಕರು, ಎಲುಬು ಮತು ಕೀಲು ವಿಭಾಗ ಇವರನ್ನು ರಿಮ್ಸ್ ಸಂಸ್ಥೆಯಿಂದ ಮೈಸೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಂಶೋಧನಾ ಸಂಸ್ಥೆಗೆ ವರ್ಗಾಯಿಸಲು ಎರಡು ವೈದ್ಯಕೀಯ ಸಂಸ್ಥೆಗಳ ಆಡಳಿತ ಮಂಡಳಿ ಸಭೆಗಳಲ್ಲಿ ಚರ್ಚಿಸಿ ಸೂಕ್ತ ನಿರ್ಣಯ ಕೈಗೊಂಡ ನಂತರ ನಿಯಮಾನುಸಾರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ದೇಶನ ನೀಡಲಾಯಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

3) ಡಾ. ಸೈಯದ್ ಶಾಹಿದ್ ಇರ್ಫಾನ್, ಹಿರಿಯ ಸ್ಥಾನಿಕರು, ಶಸ್ತ್ರ ಚಿಕಿತ್ಸಾ ವಿಭಾಗ ಇವರಿಗೆ ಉನ್ನತ ವ್ಯಾಸಂಗ ರಜೆಯನ್ನು ಮಂಜೂರು ಮಾಡುವ ಬಗ್ಗೆ.

<u>ಸಭೆಯ ತೀರ್ಮಾನ :-</u>

ಡಾ. ಸೈಯದ್ ಶಾಹಿದ್ ಇರ್ಫಾನ್, ಹಿರಿಯ ಸ್ಥಾನಿಕರು, ಶಸ್ತ್ರ ಚಿಕಿತ್ಸಾ ವಿಭಾಗ ಇವರಿಗೆ ಶಸ್ತ್ರ ಚಿಕಿತ್ಸಾ ವಿಭಾಗದ ಸ್ನಾತಕೋತ್ತರ ಪದವಿಯ ವ್ಯಾಸಂಗದ ರಜೆಯನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ನಿರ್ದೇಶನ ನೀಡಲಾಯಿತು.

4) ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಎರಡನೇ ಹಂತದ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ.

<u>ಸಭೆಯ ತೀರ್ಮಾನ :-</u>

2016–17ನೇ ಸಾಲಿಗೆ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಭಾಷಣದಲ್ಲಿ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಎರಡನೇ ಹಂತಕ್ಕೆ ಉನ್ನತಿಕರಿಸಲು ಘೋಷಣೆ ಮಾಡಿರುವುದರಿಂದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಎರಡನೇ ಹಂತಕ್ಕೆ ಅವಶ್ಯವಿರುವ ಸಿಬ್ಬಂದಿಗಳ ನೇಮಕಾತಿ ಹಾಗೂ ಸಿವಿಲ್ ಕಾಮಗಾರಿಗಳನ್ನು ನಿಯಮಾನುಸಾರ ಕೈಗೊಳ್ಳಲು ಬೇಕಾದಂತಹ ಎಲ್ಲಾ ಅವಶ್ಯ ಕ್ರಮಗಳನ್ನು ಕೈಗೊಳ್ಳುವಂತೆ ಆಡಳಿತ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

ಆಡಳಿತ ಮಂಡಳಿಯು ವಂದನೆಗಳೊಂದಿಗೆ ಮುಕ್ತಾಯವಾಯಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು